ಸಾಹಿತ್ಯ ದಾಸೋಹ ೨೧೧

ಮಾರ್ಚ್ ೨೦೨೩ ೨೫/೦೩/೨೦೨೩ರ ದಾಸೋಹದ ಬರಹಗಳ ಸಂಕಲನ

ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಸಮನ್ವಯ ಸಮಿತಿ - ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೧೧

ಗೂಗಲ್ ಮೀಟ್‌ನಲ್ಲಿ

ದಿನಾಂಕ : ೨೫/೦೩/೨೦೨೩

ಶನಿವಾರ ಮಧ್ಯಾಹ್ನ ೩.೩೦ಕ್ಕೆ

ಅಧ್ಯಕ್ಷತೆ:

ಶ್ರೀ ಕೆ ಎನ್ ಭಗವಾನ್

ಕತೆ,ಕವನ,ಪ್ರಬಂಧ,ಲೇಖನ,ಕೀರ್ತನೆ ಇತ್ಯಾದಿಗಳ ಸ್ವಂತ ರಚನೆಗಳಿಗೆ ಮಾತ್ರ ಸ್ವಾಗತ.

ಪ್ರಸ್ತುತಪಡಿಸುವವರು ಮೊದಲೇ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಲೇಖನಗಳನ್ನು ಅಧ್ಯಕ್ಷರ ದೂರವಾಣಿ ಸಂಖ್ಯೆ 9880886506ಗೆ ೨೩/೦೩/೨೦೨೩ ಗುರುವಾರದೊಳಗೆ ಕಳಿಸಿಕೊಡಬೇಕು.ಇಲ್ಲದಿದ್ದರೆ ಪ್ರಸ್ತುತಿಗೆ ಅವಕಾಶವಿಲ್ಲ.

ಪ್ರಸ್ತುತಿಗೆ ಗರಿಷ್ಠ ಕಾಲಮಿತಿ ಆರು ನಿಮಿಷಗಳು.

ಪ್ರೇಕ್ಷಕರಾಗಿ ಭಾಗವಹಿಸಲೂ ಸ್ವಾಗತವಿದೆ.

ದಾಸೋಹದಲ್ಲಿ ಪ್ರಸ್ತುತಿಯಾದ ಲೇಖನಗಳನ್ನು ಒಂದು ವಾರದೊಳಗೆ ಶ್ರೀ ಶೃಂಗೇಶ್ವರ ಶರ್ಮ ದೂರವಾಣಿ ಸಂ:9448291329 ಅವರಿಗೆ ಕಳುಹಿಸಿಕೊಡಬೇಕು

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ದಾಸೋಹವನ್ನು ಯಶಸ್ವಿ ಗೊಳಿಸಿ.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ
ಸಾಹಿತ್ಯ ದಾಸೋಹ ೨೧೧
ಪ್ರಸ್ತುತಿ ಪಡಿಸಿದವರ ಪಟ್ಟಿ

	ಹೆಸರು	ಪುಟ
೧.	ಗಣಪತಿ ಹೆಗಡೆ	1
೨.	ಗಿರಿಜಾರಾಜ್	4
೩.	ಪ್ರೋಲೇನಹಳ್ಳಿ ರಮೇಶ್	7
೪.	ಸುವರ್ಣಲಕ್ಷ್ಮಿ ಎಂ ಎಚ್	9
೫.	ಗೌರಿ ಭಟ್ಟ.	11
೬.	ಎನ್. ಶಂಕರರಾವ್	14
೭.	ನಾಗರತ್ನ ಚಂದ್ರಶೇಖರ್	15
೮.	ರಾಧಿಕಾ ವಿ ಗುಜ್ಜರ್	18
೯.	ಮಾಧುರಿ ಕೃಷ್ಣ	20
೧೦.	ಭ ರಾ ವಿಜಯಕುಮಾರ	23
೧೧.	ಅನ್ನಪೂರ್ಣ	24
೧೨.	ಶೀಲಾ ಅರಕಲಗೂಡು	26
೧೩.	ಕಮಲಾಕ್ಷಿ ಸಿ ಆರ್	29
೧೪.	ರೇಣುಕಾ ದೇಸಾಯಿ	30
೧೫.	ಗುರುರಾಜ ಶಾಸ್ತ್ರಿ	32
೧೬.	ವಿಠ್ಠಲ್ ಇಜೇರಿ	34
೧೭.	ಕೆ.ಎನ್.ಭಗವಾನ್	37
ಅಧ್ಯಕ್ಷೀಯ ನುಡಿಗಳು-ಕೆ.ಎನ್.ಭಗವಾನ್		39

೧. ಗಣಪತಿ ಹೆಗಡೆ

ಭಾಷೆ ಹಾಗೂ ವ್ಯಾಕರಣ:

ವ್ಯಾಕರಣವನ್ನು ಭಾಷೆಯ ಅಸ್ತಿ ಪಂಜರ ಎನ್ನುತ್ತಾರೆ. ಒಂದು ಸುಂದರವಾದ ಶರೀರ ಮೂಡಲು, ಮಾಂಸ-ಮಜ್ಜೆಗಳನ್ನು ಈ ಅಸ್ತಿಪಂಜರದ ಸುತ್ತಲೂ ವ್ಯವಸ್ಥಿತವಾಗಿ ಪೇರಿಸಬೇಕು. ಮಾಂಸ-ಮಜ್ಜೆಗಳನ್ನು ಬಿಗಿಯಾಗಿ ಹಿಡಿದ ಅಸ್ತಿ ಪಂಜರವು ಶರೀರಕ್ಕೆ ಸುಂದರವಾದ ರೂಪವನ್ನು ಕೊಡಲು ಸಾಧ್ಯ

ಆದುದರಿಂದಲೇ ಭಾಷೆ ಸರ್ವಾಂಗ ಸುಂದರವಾಗಿ ಕಾಣಲು ಹಾಗೂ ಬೆಳೆಯಲು ವ್ಯಾಕರಣವನ್ನು ಸಮರ್ಪಕವಾಗಿ ಬಳಸಬೇಕು ಎನ್ನುವದು ಭಾಷಾ ಶಾಸ್ತ್ರಜ್ಞರ ಅಂಬೋಣ.

ಪ್ರಾಣಿಗಳು ಅಭಿಪ್ರಾಯ ಅಥವಾ ಅನಿಸಿಕೆಗಳನ್ನು ಪರಸ್ಪರ ಹಂಚಿಕೊಳ್ಳುವಾಗ ಧ್ವನಿ ಅಥವಾ ಶಬ್ದವನ್ನು ಅವಲಂಬಿಸಿಸುತ್ತವೆ. ನಾಯಿ ಬೊಗಳುತ್ತದೆ, ಹುಲಿ ಘರ್ಜಿಸುತ್ತದೆ, ಆನೆ ಘೀಳಿಡುತ್ತದೆ, ಪಕ್ಷಿಗಳು ಚಿಲಿಪಿಲಿಗುಟ್ಟುತ್ತವೆ. ನಾಯಿಯ ಬೊಗಳುವಿಕೆಯ ಕ್ರಮವನ್ನೇ ಉದಹರಿಸಿದರೆ, ಬೊಗಳುವಿಕೆಯ ಕಾರಣವನ್ನು, ನಾಯಿಯನ್ನು ಸಾಕಿದವರು,ಧ್ವನಿಯ ಏರಿಳಿತ, ಧ್ವನಿಯ ದೀರ್ಘತೆಯ ಅವಧಿ ಮುಂತಾದುವುಗಳನ್ನು ಗಮನಿಸಿ, ಕೆಲವು ಮಟ್ಟಿಗೆ ತಿಳಿಯುತ್ತಾರೆ.

ಅಕ್ಷರಗಳು ಹುಟ್ಟಲು ನಾಲಿಗೆಯ ಹೊರಳಿಕೆಯು ಬೇಕು. ಕಂಠ, ದಂತ, ಓಷ್ಠ ಮುಂತಾದ ಭಾಗಗಳಲ್ಲಿ ನಾಲಿಗೆಯನ್ನು ಓಡಾಡಿಸಿ ಶಬ್ದೋತ್ಪತ್ತಿಯನ್ನು ಮಾಡಬೇಕು. (ಅಕುಹವಿಸರ್ಜನೀಯಾನಾಂ ಕಂಠಃ -- ಹೀಗೆ-). ಮನುಷ್ಯರನ್ನು ಹೊರತುಪಡಿಸಿ ಉಳಿದ ಯಾವುದೇ ಪ್ರಾಣಿಗೆ, ಈ ರೀತಿ ನಾಲಿಗೆಯನ್ನು ಹೊರಳಿಸಲು ಸಾಧ್ಯವಿಲ್ಲ, ಆದುದರಿಂದಲೇ ಪ್ರಾಣಿಗಳು ಶಬ್ದಗಳನ್ನು ಉಚ್ಚರಿಸಲಾರವು.

ಪ್ರಾರಂಭದಲ್ಲಿ ಮನುಷ್ಯನೂ, ಪ್ರಾಣಿಗಳ ಹಾಗೆ, ಸಂವಹನಕ್ಕೆ ಕೇವಲ ಹಸ್ತಾಭಿನಯ ಹಾಗೂ ಅಭಿನಯಪೂರ್ವಕವಾದ ನಡವಳಿಕೆಯನ್ನು ಅವಲಂಬಿಸುತ್ತಿದ್ದನು. ಆದರೆ ಕಾಲಕ್ರಮೇಣ, ಬಹುಶಃ ಪ್ರಾರಂಭದಲ್ಲಿ ಅಯಾಚಿತವಾಗಿ/ಅಯೋಜಿತವಾಗಿ/ಅಕಸ್ಮಾತ್ತಾಗಿ ಸ್ವರವು ಹೊರಟು ಅಕ್ಷರ- ಶಬ್ದಗಳು ಹುಟ್ಟಿಕೊಂಡಿರಬೇಕು. ಮೊದಮೊದಲು ಒಂದೆರಡು ಅಕ್ಷರಗಳಿಗೆ ಸೀಮಿತವಾದ ಸಂವಹನ ಪ್ರಕ್ರಿಯೆ, ಕ್ರಮೇಣ ಶಬ್ದ, ವಾಕ್ಯಗಳಿಗೆ ಮುಂದುವರಿದಿರಬೇಕು. (ಮೊದಲು ಹಸಿಯಾದ ಮಾಂಸವನ್ನೇ ತಿನ್ನುತ್ತಿದ್ದ ಮನುಷ್ಯನು ಅಕಸ್ಮಾತ್ತಾಗಿ ಬೆಂಕಿಗೆ ಬಿದ್ದು ಬೆಂದ

ಮಾಂಸದ ರುಚಿಯನ್ನು ತಿಳಿದ ಎನ್ನುತ್ತಾರೆ).

ಬೇರೆ ಬೇರೆ ಸ್ಥಳಗಳಲ್ಲಿ ಜೀವಿಸಿದ ಮನುಷ್ಯರು ಅವರದೇ ಆದ ಗುಂಪನ್ನು ನಿರ್ಮಿಸಿಕೊಂಡು ಅವರವರದೇ ಆದ ಅಕ್ಷರ- ಶಬ್ದಗಳನ್ನು ರೂಢಿಸಿಕೊಂಡಿರಬೇಕು. ಸಮಾನವಾದ ಬಾಹ್ಯ ಸ್ಪಂದನಗಳು ಹೊರಡಿಸುವ ಧ್ವನಿ ಏಕರೂಪವಾಗಿರುತ್ತಿತ್ತು. ಅದೇ ಆ ಗುಂಪಿನ ಭಾಷೆ. (ಮಾತೃಭಾಷೆ).

ಈ ವಿಚಾರವನ್ನೇ ಮೂಲವನ್ನಾಗಿಸಿಕೊಂಡಲ್ಲಿ, ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಮನುಷ್ಯರು, ಆ ಆ ಪ್ರದೇಶಗಳಿಗೆ ಮಾತ್ರ ಸೀಮಿತವಾದ ಭಾಷೆಯನ್ನು ತಮ್ಮದ್ದಾಗಿಸಿಕೊಂಡಿರಬೇಕು. ಈ ಭಾಷೆಯೇ ಆ ಜನಪದದ ಮಾತೃಭಾಷೆ ಎನಿಸಿಕೊಳ್ಳುತ್ತದೆ.

ಈ ಪ್ರಕ್ರಿಯೆಗಳು ನಡೆಯಲು ಲಕ್ಷಾಂತರ ವರ್ಷಗಳು ಕಳೆದಿರಬೇಕು. ಕ್ರಮೇಣ ಈ ಭಾಷೆಗೆ ಒಂದು ವ್ಯವಸ್ಥಿತವಾದ ರೂಪ ಬಂದಿರಬೇಕು.

ಭಾಷಾ ವಿಜ್ಞಾನದ ಚಿನ್ಹೆಗಳು ಮತ್ತು ಸೂಚನೆಗಳನ್ನು ಪ್ರೈಮರಿ ವೋಕಲ್ ಸಿಂಬಲ್ಸ್ (ಬಾಯಿಂದ ಉಚ್ಛರಿಸಿದ) ಎನ್ನುತ್ತೇವೆ. ಇವು ಮನುಷ್ಯನ (ವೋಕಲ್ ಆರ್ಗನ್ಸ್) ಬಾಯಿಯಿಂದ ಉತ್ಪತ್ತಿಯಾಗುತ್ತದೆ. ಎಲ್ಲಾ ಭಾಷೆಗಳು ಮೊದಲು ಮೌಖಿಕವಾಗಿದ್ದವು ಎನ್ನಲು ಯಾವುದೇ ವಿಶೇಷ ತರ್ಕ ಬೇಡ. ಭಾಷೆಯ ಮೂಲ ಗುರಿಯೇ ಸಂವಹನ ಪ್ರಕ್ರಿಯೆ. ಅದಕ್ಕೆ ಯಾವುದೇ ಗ್ರಾಂಥಿಕವಾದ ಅಸ್ತಿತ್ವದ ಅವಶ್ಯಕತೆ ಇಲ್ಲ. (ಬಹಳಷ್ಟು ಕಾಲದ ತನಕ ವೇದಸಾಹಿತ್ಯವೂ ಗ್ರಾಂಥಿಕವಲ್ಲದೇ ಕೇವಲ ಶ್ರೌತ ಸ್ಥಿತಿಯಲ್ಲಿಯೇ ಇತ್ತೆಂದು ಹೇಳುತ್ತಾರೆ).

ಆದರೆ ಕ್ರಮೇಣ, ಅನಿಸಿಕೆ ಅಥವಾ ಭಾವನೆಗಳನ್ನು ಸ್ಥಿರವಾಗಿ ಇಡಲು ಅಥವಾ ದೂರ ಪ್ರದೇಶದ ಜನರಿಗೆ ತಿಳಿಸಲು, ಮನುಷ್ಯನು ಬರವಣಿಗೆಯನ್ನು ಕಂಡು ಹಿಡಿದಿರಬೇಕು. ಶಿಲಾ ಶಾಸನಗಳು, ವಾಲೆಪತ್ರಗಳು ಅವುಗಳ ಉದಾಹರಣೆಗಳು. ಅಂದರೆ ಭಾಷೆಯ ಮೂಲ ಅವಶ್ಯಕತೆ ಮಾತನಾಡುವದು.

ಈ ಸಂದರ್ಭದಲ್ಲಿ ಒಂದು ಭಾಷೆ ಎನ್ನುವುದು, ಪ್ರಾಥಮಿಕವಾಗಿ ಮಾತನಾಡುವುದು ಮತ್ತು ಬರೆಯುವುದು ಅನಂತರದ್ದು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಈ ಕೆಳಗಿನ ಕಾರಣಗಳು ಸ್ಪಷ್ಟೀಕರಣ ನೀಡುತ್ತವೆ. ಪ್ರತಿಯೊಂದು ಸಾಮಾನ್ಯ ಮಗು ಯಾವುದಾದರೂ ಒಂದು ಭಾಷೆಯನ್ನು ಮಾತನಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ನಂತರದ ದಿನಗಳಲ್ಲಿ ಆ ಮಗು ಆ ಭಾಷೆಯನ್ನು ಬರೆಯಲು ಕಲಿಯಬಹುದು ಅಥವಾ ಕಲಿಯದೇ ಇರಬಹುದು. ಜಗತ್ತಿನಲ್ಲಿ ಎಷ್ಟೋ ಭಾಷೆಗಳಿಗೆ ಲಿಪಿಯೇ ಇರುವುದಿಲ್ಲ. ಅವು ಬಾಯಿಂದ ಬಾಯಿಗೆ

ಹರಡುತ್ತಲೇ ಬಳಕೆಯಾಗುತ್ತವೆ. ಬರವಣಿಗೆಯನ್ನು ತಿಳಿಯದೆಯೇ ಬಹುಪಾಲು ಜನರು ತಮ್ಮ ಜೀವನವನ್ನು ಕಳೆಯುತ್ತಿದ್ದರು. ಇದು ಈಗಲೂ ನಡೆದಿದೆ. ನಿರಕ್ಷರಿಗಳ ಪ್ರಮಾಣ ಇತ್ತಿತ್ತಲಾಗಿ ಕಡಿಮೆಯಾಗುತ್ತಿದೆ ಎನ್ನಿ.

ಶಬ್ದಗಳ ಏರಿಳಿತ, ಶಬ್ದ ಹಾಗೂ ವಾಕ್ಯಗಳ ನಿಲುಗಡೆ ಇವು ಸಂವಹನದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಒಂದೇ ಶಬ್ದವಾದರೂ ಧ್ವನಿಗಳ ಏರಿಳಿತಗಳಿಂದ ಬೇರೆ ಬೇರೆ ಅರ್ಥಗಳನ್ನು ಸ್ಫುರಿಸುತ್ತದೆ. ಉದಾ: ಬೇಡ (ನಿರಾಕರಣೆ), ಬೇಡ (ಬೇಟೆಗಾರ). ಕೆಲವು ಶಬ್ದಗಳ ವ್ಯತ್ಯಾಸ ಕನ್ನಡದಲ್ಲಿ ಕಾಣಸಿಗುತ್ತದೆ. ಉದಾ: ತೊರೆ-ತೊಱೆ, ಅರಸು-ಅಱಸು. ಮುಂತಾದವುಗಳು. ಅಲ್ಪ ವಿರಾಮ, ಪೂರ್ಣ ವಿರಾಮ, ಪ್ರಶ್ನಾರ್ಥಕ ಮೊದಲಾದ ಚಿಹ್ನೆಗಳೂ ಭಾಷೆಯ ಅರ್ಥ ಸ್ಫುರಣೆಗೆ ಹೆಚ್ಚು ಮಹತ್ವ ಕೊಡುತ್ತವೆ.

ಭಾಷೆಯ ವ್ಯವಸ್ಥಿತವಾದ ನಿರ್ವಹಣೆಗಾಗಿ ಏರ್ಪಟ್ಟ ಕ್ರಮವೇ ವ್ಯಾಕರಣ. ಈ ವ್ಯಾಕರಣ ಬೇರೆ ಬೇರೆ ಭಾಷೆಗಳಿಗೆ ಬೇರೆ ಬೇರೆಯವೇ ಆಗಿರುತ್ತದೆ. ಯಾರು ಅಥವಾ ಯಾರು ಯಾರು, ಯಾವಾಗ ವ್ಯಾಕರಣವನ್ನು ಕಂಡುಹಿಡಿದರು ಎನ್ನುವದು ತಿಳಿಯುವದು ಅಸಾಧ್ಯ. ಭಾಷೆ ಹುಟ್ಟಿಕೊಂಡ ಸಾವಿರಾರು ವರ್ಷಗಳ ನಂತರ ವ್ಯಾಕರಣ ರೂಪುಗೊಳ್ಳುತ್ತದೆ.

ಭಾಷೆ ಹಾಗೂ ವ್ಯಾಕರಣಗಳಲ್ಲಿ ಬೀಜವೃಕ್ಷ ನ್ಯಾಯ ಎನ್ನುವದು ಇಲ್ಲ. ಭಾಷೆಯೇ ಮೊದಲು. ವ್ಯಾಕರಣ ಆಮೇಲೆ. ವ್ಯಾಕರಣ, ಭಾಷೆಗೆ ಒಂದು ಸ್ವರೂಪವನ್ನು ಕೊಡುವದು ಸುಳ್ಳಲ್ಲ. ವ್ಯಾಕರಣವಿಲ್ಲದೇ ಇದ್ದ ಭಾಷೆ ಒಂದು ಶಬ್ದ ಸಂಯೋಜನೆ ಅಂತಾದೀತೇ ವಿನಃ ಪರಿಪೂರ್ಣ ಭಾಷೆ ಅನಿಸಿಕೊಳ್ಳುವದಿಲ್ಲ.

ಎಲ್ಲಾ ಭಾಷೆಗಳಿಗೂ ಸ್ವಂತ ಲಿಪಿ ಇರಲೇ ಬೇಕೆಂದೇನೂ ಇಲ್ಲ. ಸಂಸ್ಕೃತ, ಹಿಂದಿಯಂತಹ ಭಾಷೆಗಳೇ 'ದೇವನಾಗರಿ' ಲಿಪಿಯನ್ನು ಅವಲಂಬಿಸುತ್ತವೆ. ಕೊಂಕಣಿ, ತುಳು, ಹೈವ, ಕೊಡವ ಮುಂತಾದ ಭಾಷೆಗಳಿಗೆ ಸ್ವಂತ ಲಿಪಿಯೇ ಇಲ್ಲ. ಆದುದರಿಂದ ಲಿಪಿ ಎನ್ನುವದು ವ್ಯಾಕರಣದ ಅವಿಭಾಜ್ಯ ಅಂಗ ಅಂತ ಪರಿಗಣಿಸುವ ಹಾಗಿಲ್ಲ. ಈಗಿನ ಸಂಕ್ರಮಣ ಯುಗದಲ್ಲಂತೂ, ಇಂಗ್ಲೀಷ್ ಭಾಷೆಯನ್ನು ಕನ್ನಡ ಲಿಪಿಯಲ್ಲೂ, ಕನ್ನಡವನ್ನು ಇಂಗ್ಲೀಷ್ ಲಿಪಿಯಲ್ಲೂ 'ಟೈಪ್' ಮಾಡುವುದನ್ನು ಕಾಣುತ್ತೇವೆ. ಕ್ರಮೇಣ ಇದೂ ವ್ಯಾಕರಣ ಒಪ್ಪಿತ ಕ್ರಮವೇ ಆದೀತು. ಆ ಆ ಲಿಪಿಯ ಶಬ್ದ ಪ್ರಯೋಗ ಗುತ್ತಾದರೆ ಸಾಕು, ಅಷ್ಟೇ.

ಇನ್ನು ಇಂಗ್ಲೀಷ್ ಅಥವಾ ಬೇರೆ ಭಾಷೆಯ ಲಿಪಿಗಳಲ್ಲಿ ಕನ್ನಡ ಸಾಹಿತ್ಯ ಬಂದೀತೇ?

ಆಗ ವ್ಯಾಕರಣ ದೋಷವನ್ನು ಕಂಡುಹಿಡಿಯುವದು ಹೇಗೆ?

೨. ಗಿರಿಜಾರಾಜ್

ಅಪ್ಪ ಎಲ್ಲಿ ಹೋದರು?

ಅಂದು ದೇವನಾಗ್ ಎದ್ದಿದ್ದೇ ತಡವಾಗಿ.... ಈ ಹೊತ್ತಿಗೆ ಅಪ್ಪನ ಮಂತ್ರೋಚ್ಛಾರ ತನ್ನ ಕಿವಿಯ ಮೇಲೆ ಬೀಳಬೇಕಿತ್ತು. ಎಷ್ಟೇ ಚಳಿ ಇದ್ದರೂ ಅಪ್ಪ ಎದ್ದು ಸ್ನಾನ ಮಾಡಿ ಪೂಜೆಗೆ ಕುಳಿತುಬಿಡುತ್ತಿದ್ದರು. ದೇವರ ಮನೆಯಿಂದ ಸುವಾಸನೆಯ ಹೊಗೆಯ ಪರಿಮಳ ಮನೆಯನ್ನೆಲ್ಲ ವ್ಯಾಪಿಸಿ ಮನಸಿಗೆ ಅಪೂರ್ವ ಶಾಂತಿ ನೀಡುತ್ತಿತ್ತು. ಆದರೆ ನನ್ನ ಹೆಂಡತಿ ಶಾಂತ ಸದಾ ವಟಗುಟ್ಟುವ ಸ್ವಭಾವ! "ಅಬ್ಬ! ಬೆಳಗಾಯಿತು ಅಂದ್ರೆ ಈ ಮಂತ್ರೋಚ್ಛಾರ, ಹೊಗೆ ವಾಸನೆ... ಅದೆಷ್ಟು ಹೊತ್ತು ಪೂಜೆ ಮಾಡ್ತಾರೋ..."ಪೂಜೆ ಮಾಡುವುದು ಮನೆಯ ಜನರೆಲ್ಲರ ಒಳಿತಿಗೆ, ಮನಸ್ಸು ಪ್ರಶಾಂತವಾಗಿರುತ್ತದೆ... ನೀನು ಒಂದು ದಿನನಾದರೂ ದೇವರ ನಾಮ ಅಂತ ದೇವರು ಮುಂದೆ ನಿಂತು ಹಾಡಿದ್ದು ನಾನು ನೋಡಲಿಲ್ಲ...ಎಂದರೆ "ಹೌದು ಬಿಡ್ರಿ, ನಾವೆಲ್ಲ ದಡ್ಡರು, ನಮಗೇನು ಬರಲ್ಲ" ಎಂದು ಮುನಿಸಿಕೊಂಡು ಬಿಡುತ್ತಿದ್ದಳು. ಇವತ್ತೇಕೆ ಇಷ್ಟು ಮೌನವಾಗಿದೆ ಮನೆ. ಅಪ್ಪಾಜಿ ದೀಪ ಹಚ್ಚುವುದು ಬಿಟ್ಟು ಒಬ್ಬರೇ ಎಲ್ಲಿಹೋದರು? ಎಂದು ವಿಸ್ಮಯ ಗೊಳ್ಳುತ್ತಾ ಎದ್ದು ಬಂದು ಅಪ್ಪನ ಕೋಣೆ ಬಾಗಿಲು ದೂಡಿದೆ. ಅವರು ಅಲ್ಲಿಯೂ ಇರಲಿಲ್ಲ . ಅವರಿಗೆ ಇತ್ತೀಚೆಗೆ ಮಂಡಿ ನೋವು, ಸ್ವಲ್ಪ ಹಿಮ್ಮಡಿ ನೋವು ಎಂದು ನರಳು ತ್ತಿದ್ದರು, ಒಬ್ಬರೇ ಏಕೆ ಹೋದರು? ಅವರ ವಾಕಿಂಗ್ ಸ್ಟಿಕ್, ಹೊದೆಯಲು ಬಳಸುತ್ತಿದ್ದ ಶಾಲು ಎರಡೂ ಕೋಣೆಯಲ್ಲಿ ಇಲ್ಲ! ವರಂಡಾದ ಮೂಲೆಯಲ್ಲಿ ಬಿಟ್ಟಿರುತ್ತಿದ್ದ ಜೊತೆ ಚಪ್ಪಲಿಯೂ ಇಲ್ಲ, ನಾನ್ಯಾಕೆ ಇಷ್ಟು ಗಾಬರಿ ಆಗ್ತಾಯಿದ್ದೇನೆ, ಅಪ್ಪ ಒಂದೊಂದು ಸಲ ವಾಕಿಂಗ್ ಮುಗಿಸಿ ಬಂದು ಸ್ನಾನ ಮಾಡಿ ಪೂಜೆ ಮಾಡುತ್ತಾರೆ. ಅಪ್ಪನಿಗೆ ತುಂಬಾ ಇಷ್ಟವಾದ ಜಾಗ ಎಂದರೆ ಮನೆಯಿಂದ ಸ್ವಲ್ಪ ದೂರದಲ್ಲಿ ಇರುವ ಬೆಟ್ಟದ ತಪ್ಪಲಲ್ಲಿ ಹರಿಯುವ, ಸದಾ ತಂಗಾಳಿ ಬೀಸುವ ಸಣ್ಣ ಹೊಳೆಯ ತೀರ. ತೀರದಲ್ಲಿನ ಉಸುಕಿನ ಮೇಲಿದ್ದ ಒಂದು ಬಂಡೆಯ ಮೇಲೆ ತುಂಬಾ ಹೊತ್ತು ಕುಳಿತುಬಿಡುತ್ತಿದ್ದುದನ್ನು ಅನೇಕ ಸಲ ಕಂಡಿದ್ದೇನೆ. ಅವರ ಇಷ್ಟದ ಸ್ಥಳ ಅದು. ಅಮ್ಮ ಅವರನ್ನು ಇತ್ತೀಚೆಗೆ ಅಗಲಿದ ಮೇಲೆ ಒಂಟಿ ಜೀವವಾಗಿ ಬಿಟ್ಟಿದ್ದರು. ಮಾತು ಬಹಳ ಕಡಿಮೆ ಮಾಡಿದ್ದರು. ಅಮ್ಮನ ಸ್ವಭಾವ ಅಪ್ಪನ ಸಾತ್ವಿಕ ಸ್ವಭಾವಕ್ಕೆ ಹೋಲಿಸಿದರೆ ಸ್ವಲ್ಪ ಜೋರು....

ತುಂಬಾ ಸಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಬಂದದ್ದರಿಂದ ರೀತಿ ರಿವಾಜು ಜಾಸ್ತಿ, ನನ್ನವಳು ಸ್ವಲ್ಪ ಆಧುನಿಕ ಕುಟುಂಬದಿಂದ ಬಂದದ್ದರಿಂದ ಅಮ್ಮನ ಸ್ವಭಾವ ಅವಳಿಗೆ ಇಷ್ಟ ವಾಗುತ್ತಿರಲಿಲ್ಲ. ಅಮ್ಮ ಸ್ವಲ್ಪ ಹಟವಾದಿಯೇ. ತನ್ನ ಮಾತೇ ನಡೆಯಬೇಕೆಂದು ಪಟ್ಟು ಹಿಡಿಯುತ್ತಿದ್ದರು. ಮಾತಿಗೆ ಮಾತು ಸೇರಿಸುವ ಇವಳು

ಎಷ್ಟೋ ಸಲ ಅಮ್ಮನ ಒರಟುತನದಿಂದಾಗಿ ಆಗಾಗ ಬೈಗುಳ ಮಾತ್ರವಲ್ಲ ಏಟುಗಳನ್ನೂ ತಿನ್ನುತ್ತಿದ್ದಳು.

ಅಮ್ಮ ಹಾಗೆ ಮಾಡುವುದರ ಬಗ್ಗೆ ನನಗೆ ಕೋಪ ಬಂದರೂ ನಾನು ಅಮ್ಮನನ್ನು ಎಂದೂ ಅವಳೆದು ರಿಗೆ ಬಿಟ್ಟು ಕೊಟ್ಟಿರಲಿಲ್ಲ. ಅಮ್ಮನ ಹೊಟ್ಟೆಯಲ್ಲಿ ಗೆಡ್ಡೆ ಬೆಳೆದು, ಚಿಕಿತ್ಸೆ ಫಲ ಕಾರಿಯಾಗದೆ, ತೀರಿ ಹೋದಾಗ ನಾನು ತಬ್ಬಲಿಯಂತೆ ತುಂಬಾ ಅತ್ತು ಬಿಟ್ಟಿದ್ದೆ . ಶಾಂತ ಒಳಗೊಳಗೇ ಸಂತಸವಾಗಿದ್ದರೂ ತೋರಿಸಿಕೊಂಡಿರಲಿಲ್ಲ. ಅಮ್ಮನ ಕಾಟವಿಲ್ಲದೆ ಇದ್ದ ಶಾಂತಿಗೆ ಸೌಮ್ಯ ಸ್ವಭಾವದ ಮಾವನನ್ನು ಕಂಡರೆ ಕೋಪ ಅಷ್ಟಾಗಿ ಇರದಿದ್ದರೂ, ಪ್ರೀತಿಯಿಂದ ನೋಡಿಕೊಳ್ಳುತ್ತಿರಲಿಲ್ಲ. ನಾನು ಎದುರುಗಡೆ ಇದ್ದಾಗ ಒಂದಿಷ್ಟು ಬಿಸಿ ಊಟ ಅಷ್ಟೇ! ಉಳಿದಂತೆ ಅವರಿಗೇ ತಂಗಳೇ ಗತಿ. ಅಪ್ಪ ನನಗೆ ಹೇಳ ದಿದ್ದರೂ ಒಂದೆರಡು ಸಲ ನನ್ನ ಗಮನಕ್ಕೆ ಅದು ಬಂದಿತ್ತು. ಮನೆಯ ಶಾಂತಿ ಕದಡಬಾರದೆಂದು ಸೂಕ್ಷ್ಮವಾಗಿ ಅವಳನ್ನು ಎಚ್ಚರಿಸಿದ್ದೆ . ಆಗಲಿ ಎಂದು ತಲೆಯಾಡಿಸಿದರೂ ಮತ್ತೆ ಅದೇ ನಡೆಯುತ್ತಿತ್ತು ಎಂದು ನನಗೆ ಗೊತ್ತಿತ್ತು. ಆದರೆ ಅಪ್ಪ ಒಂದು ದಿನವೂ ಸೊಸೆಯನ್ನು ದೂರಿದವರಲ್ಲ. ತಂಗಳು ನೀಡಿದರೂ ಕಣ್ಣಿಗೆ ಒತ್ತಿಕೊಂಡು ತಿನ್ನುವವರು....

ಅಪ್ಪನನ್ನು ಎಲ್ಲಿಗಾದರೂ ಸ್ಥಳ ಬದಲಾವಣೆಗೆ ಕರೆದೊಯ್ಯ ಬೇಕೆಂದು ನಾನು ಆಸೆ ಪಟ್ಟರೂ, ಆಫೀಸಿನ ತುಂಬ ಕೆಲಸಗಳ ನಡುವೆ ನನಗೆ ಸಮಯ ಸಿಕ್ಕಿರಲಿಲ್ಲ. ಅಪ್ಪನಿಗೆ ಈಗ 81 ವರ್ಷ. ಸಾಕಷ್ಟು ದುರ್ಬಲರಾಗಿದ್ದರು. ಮಾತಾಡುವುದು ಪೂರ್ತಿ ನಿಲ್ಲಿಸಿದ್ದರು. ನಾನು ಬಲವಂತ ಮಾಡಿದರೆ ಒಂದು, ಎರಡು ಮಾತು. ಈ ಕೆಲಸದ ಒತ್ತಡದಲ್ಲಿ ಅಪ್ಪನೊಂದಿಗೆ ನಾನು ಹೆಚ್ಚು ಹೊತ್ತು ಕಳೆಯ ಬೇಕೆಂದು ಕೊಂಡರೂ ಸಾಧ್ಯ ವಾಗದೆ ಒಂದು ರೀತಿಯ ಪಾಪಪ್ರಜ್ಞೆ ಕಾಡಲಾರಂಭಿಸಿತ್ತು.
"ಅಪ್ಪ ವೀಕಾಗಿದ್ದಾರೆ, ಚೆನ್ನಾಗಿ ನೋಡಿಕೋ" ಎಂದಾಗ ತಲೆಯಾಡಿಸಿ, ಮುಖವೂದಿಸಿಕೊಂಡು ಶಾಂತಿ ಅಲ್ಲಿಂದ ಹೊರಟು ಹೋಗುತ್ತಿದ್ದಳು.

ಒಮ್ಮೆ ಅಪ್ಪ, ಬಾಯಿ ಬಿಟ್ಟು "ಮಗು ನನ್ನನ್ನು ವೃದ್ದಾಶ್ರಮಕ್ಕೆ ಸೇರಿಸು. ಅಲ್ಲಿ ನನ್ನ ವಯಸ್ಸಿನವರು ಸಿಗುವುದರಿಂದ ಬೇಸರ ಕಳೆಯುತ್ತದೆ ಎಂದು ಹೇಳಿದಾಗ ನಾನು ಪ್ರತಿಭಟಿಸಿದೆ. ನನಗೆ ಅದು ಸುತರಾಂ ಇಷ್ಟ ವಿರಲಿಲ್ಲ. ಆದರೆ ಆಲೋಚನೆ ಮಾಡಿದಾಗ ಅಪ್ಪ ಹೇಳುವುದು ಸರಿಯಲ್ಲವೇ? ಆಶ್ರಮದ ಪ್ರಶಾಂತ ವಾತಾವರಣದಲ್ಲಿ ಅವರ ಮನಸ್ಸು ಅವರದೇ ಇಳಿ ವಯಸ್ಸಿನವರ ಜೊತೆ ಉಲ್ಲಸಿತ ವಾಗಬಹುದು ಎಂದು ಅನಿಸಿದರೂ, ನಾನು ಮಗ ಗುಂಡು ಕಲ್ಲಿನ ಹಾಗೆ ಬದುಕಿದ್ದೂ ಅಪ್ಪನನ್ನು ಆಶ್ರಮಕ್ಕೆ ಸೇರಿಸಿದರ ಜನ ಏನೆಂದಾರು? ಬೇಡ, ಬೇಡ" ಎಂದು ಆ ಯೋಚನೆಯನ್ನು ದೂರ ತಳ್ಳುತ್ತಿದ್ದೆ. ಎಷ್ಟೆಲ್ಲ ಯೋಚನೆಗಳು ಮರುಕಳಿಸುತ್ತಿವೆ ಅಪ್ಪ ಇಷ್ಟು ಹೊತ್ತಾದರೂ ವಾಕಿಂಗ್ ನಿಂದ ಬರದೇ ಇರುವರೆ? ಎಂದು ಅವರ ಕೋಣೆಗೆ ಹೋಗಿ ನಿಂತಾಗ ಮೇಜಿನ ಮೇಲೆ ಒಂದು ಖಾಲಿ ಹಾಳೆಯಲ್ಲಿ ಅಪ್ಪನ ನಡುಗುವ

ಕೈಯಿಂದ ಬರೆದ ಅಕ್ಷರಗಳು ಕಂಡವು. ನಾನು ಭಯದಿಂದ ಕೈಗೆ ತೆಗೆದು ಕೊಂಡೆ......

" ಮಗೂ, ನನಗೇಕೋ ಈ ಜೀವನ ಬೇಡವೆನಿಸುತ್ತಿದೆ....ಅವಳು ಹೋದ ಮೇಲೆ ಯಾವುದರಲ್ಲೂ ಆಸಕ್ತಿ ಇಲ್ಲ, ದೇವ್ರು ಬಹುಶಃ ಈ ಪತ್ರ ಸಿಗುವ ಹೊತ್ತಿಗೆ ನಾನು ನಿನ್ನಿಂದ ಎಂದೂ ಹುಡುಕಲಾರದಷ್ಟು ದೂರ ಹೊರಟು ಹೋಗಿರು ತ್ತೇನೆ. ನಾನಿದ್ದು ಏನು ಪ್ರಯೋಜನ ಮಗೂ? ಸುಮ್ಮನೆ ಭೂಮಿಗೆ ಭಾರ! ಇನ್ನೊಂದು ವಿಷಯ ಯಾವುದೇ ರೀತಿಯಲ್ಲೂ ನನ್ನ ಬೇಸರಕ್ಕೆ ಸೊಸೆ ಕಾರಣ ಅಲ್ಲ. ಅವಳನ್ನು ಚೆನ್ನಾಗಿ ನೋಡಿಕೋ, ಮನೆಯ ಶಾಂತಿ ಕೆಡುವ ಯಾವ ಪ್ರಯತ್ನವನ್ನೂ ಮಾಡಬೇಡ...ಹೆಂಡತಿಯನ್ನು ಚೆನ್ನಾಗಿ ನೋಡಿಕೋ, ನಿಮ್ಮ ಅಮ್ಮನಿದ್ದಾಗ ಸೊಸೆಯನ್ನು ಸಾಕಷ್ಟು ಗೋಳುಹುಯ್ದಿದ್ದಾಳೆ. ಹೆಣ್ಣು ಮಕ್ಕಳೆಲ್ಲ ತಾಯಿಯ ಸ್ವರೂಪರೇ! ನೀನು ನನಗೆ ಮಗನಾಗಿ ಎಲ್ಲ ಕರ್ತವ್ಯ ಮಾಡಿರುವೆ, ನಾನಿನ್ನು ಬರುತ್ತೇನೆ,

ಇತಿ ನಿನ್ನ ಪ್ರೀತಿಯ ಅಪ್ಪ

ಕಂಬನಿಯ ಹನಿಗಳು ಅಲ್ಲಲ್ಲಿ ಬಿದ್ದು ಕಾಗದ ಆ ಭಾಗದಲ್ಲಿ ಸ್ವಲ್ಪ ಕಲೆ ನಿಂತಂತೆ ಕಾಣುತ್ತಿತ್ತು. ಅಪ್ಪ ಯಾವಾಗಲೂ ಕುಳಿತುಕೊಳ್ಳುತ್ತಿದ್ದ ಹೊಳೆಯ ಬಳಿಗೆ ಓಡಿದೆ. ಅದೋಅಲ್ಲಿ! ಅಪ್ಪನ ಪಾದರಕ್ಷೆ ಗಳು ಅನಾಥವಾಗಿ ಬಿದ್ದಿವೆ. ಅಯ್ಯೋ ದೇವರೇ ಏನಾಗಿಹೋಗಿದೆ? ಅಪ್ಪ ಬಯಸಿದಂತೆ ವೃದ್ಧಾ ಶ್ರಮಕ್ಕಾದರೂ ಸೇರಿಸಿದ್ದರೆ ಹೀಗಾಗುತ್ತಿರಲಿಲ್ಲ.

ಆಗ ತಾನೇ ಅರುಣೋದಯವಾಗಿತ್ತು. ಪೂರ್ವದ ಅಂಗಳದಲ್ಲಿ ಕೆಂಪು ಬಣ್ಣ ಮನೋಹರವಾಗಿದ್ದರೂ ನನ್ನನ್ನು ಅಂದು ಅದು ಸೆಳೆಯಲಿಲ್ಲ. ದೋಣಿ ನಡೆಸುವ ಚಿಕ್ಕಯ್ಯ ಓಡಿ ಬರುತ್ತಿರುವುದು ಕಂಡಿದ್ದು , ನನ್ನ ಬಳಿಗೆ ಓಡಿ ಬಂದವನೇ "ಅಯ್ಯಾವ್ರೆ! ಅಜ್ಜಾವರು ದಿನಾ ಇಲ್ಲಿ ಬಂದು ಕೂತುಕೊಳ್ಳುತ್ತಿದ್ದರಲ್ಲ, ಹೊಳೆಗೆ ಹಾರಿ ಕೊಂಡವರೇ..." ದುಃಖದ ಕಟ್ಟೆ ಒಡೆಯಿತು. ಅವನೊಂದಿಗೆ ಓಡಿದೆ. ಅಪ್ಪನ ನಿರ್ಜೀವ ದೇಹ ನಿಷ್ಪಂದವಾಗಿ ಹೊಳೆಯ ತೀರದಲ್ಲಿ ಕಾಣಿಸಿತು. ಅಷ್ಟು ಹೊತ್ತಿಗೆ ಅನೇಕರು ನನ್ನ ಸಹಾಯಕ್ಕೆ ಬಂದರು. ಜನಗಳ ಸಹಾಯದಿಂದ ಅಪ್ಪನ ದೇಹವನ್ನು ಹೊಳೆಯ ದಡದಿಂದ ಎತ್ತಿ ಸ್ನೇಹಿತ ರೊಬ್ಬರು ತಂದಿದ್ದ ಕಾರಿನಲ್ಲಿ ಹಾಕಿಕೊಂಡೆವು. ದೂರದಲ್ಲಿ, ಅನಾಥವಾಗಿ ಬಿದ್ದಿದ್ದ ಪಾದರಕ್ಷೆಗಳನ್ನು

ಎದೆಗಪ್ಪಿ ನಾನು ಬಿಕ್ಕಿ ಬಿಕ್ಕಿ ಅತ್ತು ಬಿಟ್ಟೆ...

೩. ಪೋಲೇನಹಳ್ಳಿ ರಮೇಶ್

ನಿವೃತ್ತ

ಈಗ ಇವನು ನಿವೃತ್ತ
ಕಳೆದ ಅರವತ್ತು ವರ್ಷಗಳು
ಮತ್ತೆ ಮರಳುವುದಿಲ್ಲ ದಿಟ
ಜೋಳಿಗೆಯಲ್ಲಿದೆ ಗಳಿಸಿದ ಅಷ್ಟಿಷ್ಟು ಭತ್ಯ
ಮನದ ಮೂಲೆಯಲಿ ಅರಗದೇ ಉಳಿದ ಸತ್ಯ
ಅವಿತಿಟ್ಟ ಕನಸುಗಳ ಆಟೋ ಪ್ಲೇ

ಕಪ್ಪು-ಬಿಳುಪಿನ ಚಿತ್ರ:
ಕಾಣುವುದು ತನ್ನದೇ ಮುಖ
ಹಳ್ಳಿಶಾಲೆಯ ತೋಟ
ಕೈಗೆಟುಕದೇ ಹೋದ ಪಾರಿಜಾತ
ಸೆಂಚುರಿಗೆ ಒಂದೇ ರನ್ನು ಇರುವಾಗ
ಕಳೆದುಹೋದ ಚೆಂಡು!

'ಎಳೆಗರು ಎತ್ತಾಗದೆ?'
ಸುಮ್ಮನಿದ್ದರೂ ಓಡಿತ್ತು ಕಾಲ
ದೇಶ ಸುತ್ತಿತ್ತು ರಭಸ
ಬಸ್ಸು ಹತ್ತಿದವನಿಗೆ ನಗರ

ಸೈಕಲ್ ಹೊಡೆದರೆ
ಎಣಿಸುತ್ತಲೇ ಹೋದರೆ
ಜೇಬಿಗಿಳಿಸಿದ ಹಣ
ತಾನೇ ಸುತ್ತ ಕಟ್ಟಿಕೊಂಡ ಗೋಡೆ!

ಎತ್ತು ಮುದಿಯಾಗದೇ?
ಒಳಗಿದ್ದ ಅವ
ಪಿಸುಮಾತಲಿ ಇರಿಯುತ್ತಿದ್ದ ಅವ
ಈ ನಡುವೆ ಕಾಣದೆ ಸತ್ತ ಅವ
ಮತ್ತೆ ಪ್ರತ್ಯಕ್ಷ !
ಇವನು ನಿವೃತ್ತನಾದಾಗ ಅವನು ಪ್ರವೃತ್ತ

ನೆನಪಿಸುತ್ತಿದ್ದಾನೆ
ಏರದೆ ಹೋದ ಹಳ್ಳಿಯ ಗುಡ್ಡ
ಎಟುಕದೇ ಹೋದ ಪಾರಿಜಾತ
ಕ್ರಿಕೆಟ್ಟು, ಸಂಗೀತ

ಹೇಳುತ್ತಾನೆ-
ತೋರುತ್ತೇನೆ ಬಾ
ಇಂದೂ ಬೆಳದಿಂಗಳು
ಒಟ್ಟಿಗೆ ಕುಳಿತು ತಿನ್ನುವ ಊಟ
ಎಣಿಸದೆ ಇತ್ತ ಅಮ್ಮನ ಕೈತುತ್ತು
ಹುತ್ತ ಕೆಡವಿದರೆ ಚಿತ್ತ
ಮತ್ತೆ ಬಂದಾವು ಪ್ರಭವ ವಿಭವ..
ಮತ್ತೊಂದು ವೃತ್ತ
ಕೈಗೆತ್ತಿಕೋ ಬ್ಯಾಟು
ಹೊಡೆಯಲೂ ಬಹುದು
ಸೆಂಚುರಿಯ ರನ್ನು!

೪. ಸುವರ್ಣಲಕ್ಷ್ಮಿ ಎಂ ಎಚ್

ಅರಸೀಕೆರೆಯಲ್ಲಿ ದೇಗುಲ - ಮಾಲೇಕಲ್ಲು ತಿರುಪತಿ

ಬಾಲಾಜಿ ಹಾಗೂ ಗೋವಿಂದ ರಾಜ ದೇಗುಲ.

ತಿರುಪತಿ ವೆಂಕಟರಮಣಸ್ವಾಮಿಯನ್ನು ಕಲಿಯುಗದ ಪ್ರತ್ಯಕ್ಷ ದೈವ ಎಂದೇ ಭಕ್ತರು ನಂಬುತ್ತಾರೆ. ಆದರೆ ಪದೇ ಪದೇ ತಿರುಪತಿಗೆ ಹೋಗಲು ಸಾಧ್ಯವಿಲ್ಲದವರು ಕರ್ನಾಟಕ ದಲ್ಲಿಯೇ ಇರುವ ಪುರಾಣ ಪ್ರಸಿದ್ಧ ಬಾಲಾಜಿ ದೇಗುಲಗಳಿಗೆ ಭೇಟಿ ನೀಡುತ್ತಾರೆ.ಅಂತಹುದೇ ಒಂದು ದೇಗುಲವೇ ಅರಸೀಕೆರೆಯ ಬಳಿ ಇರುವ ಮಾಲೇಕಲ್ಲು ತಿರುಪತಿ ದೇಗುಲ.

ಈ ದೇಗುಲಕ್ಕೊಂದು ಪುರಾಣದ ಕಥೆ ಹೇಳುತ್ತಾರೆ ಸ್ಥಳೀಯರು. ಬಹಳ ಹಿಂದೆ ವಶಿಷ್ಠ ಮಹರ್ಷಿಗಳು ಇಲ್ಲಿನ ಬೆಟ್ಟದ ತುದಿಯಲ್ಲಿ ವೆಂಕಟರಮಣಸ್ವಾಮಿ ವಿಗ್ರಹವನ್ನು ಪ್ರತಿಷ್ಟಿಸಿ ತಪಸ್ಸು ಮಾಡುತ್ತಿದ್ದರಂತೆ ಅವರ ತಪಸ್ಸಿಗೆ ಮೆಚ್ಚಿ ವೆಂಕಟರಮಣಸ್ವಾಮಿ ಅವರಿಗೆ ದರುಶನ ನೀಡಿದರಂತೆ. ಕೆಲದಿನಗಳ ನಂತರ ವಶಿಷ್ಠ ಮಹರ್ಷಿ ಗಳು ದೇಶಸಂಚಾರಕ್ಕೆ ಹೊರಡುತ್ತಾರೆ. ಬೆಟ್ಟದ ತುದಿಯಲ್ಲಿದ್ದ ಈ ಬಾಲಾಜಿ ಪೂಜೆ ಪುನಸ್ಕಾರಗಳಿಲ್ಲದೆ ಭೂಗತವಾಗಿಬಿಡುತ್ತದೆ. ಈಗ್ಗೆ 800ವರ್ಷಗಳ ಹಿಂದೆ ಈ ಪ್ರಾಂತ್ಯವನ್ನು ಆಳುತ್ತಿದ್ದ ಚಿತ್ರದುರ್ಗದ ಪಾಳೇಗಾರ ತಿಮ್ಮಪ್ಪನಾಯಕ ವೆಂಕಟರಮಣಸ್ವಾಮಿಯ ಪರಮಭಕ್ತನಾಗಿದ್ದು

ತಿರುಪತಿಗೆ ಸಾಧ್ಯವಾದಾಗೆಲ್ಲಾ ಭೇಟಿ ನೀಡುತ್ತಿದ್ದನು. ಹೀಗಿರುವಾಗೊಮ್ಮೆ ಆತನಿಗೆ ತಿರುಪತಿಗೆ ಹೋಗಲು ಆಗಲಿಲ್ಲ ಆದಿನ ರಾತ್ರಿ ಆತನ ಕನಸಿನಲ್ಲಿ ವೆಂಕಟರಮಣಸ್ವಾಮಿಯು ಆತನ ಕನಸಿನಲ್ಲಿ ಕಾಣಿಸಿಕೊಂಡು "ತಿರುಪತಿಗೆ ಬರಲಾಗದ್ದಕ್ಕೆ ಚಿಂತಿಸಬೇಡ ನಾನು ಅಮರಗಿರಿ ಬೆಟ್ಟದ ಮೇಲೆಯೇ ಇದ್ದೇನೆ ಭೂಮಿಯಲ್ಲಿ ಹುದುಗಿರುವ ನನ್ನನ್ನು ತೆಗೆದು ದೇಗುಲ ಕಟ್ಟಿಸು ಎಂದು ಹೇಳಿದರಂತೆ , ನೀನು ಬೆಟ್ಟದ ಬುಡಕ್ಕೆ ಹೋದಾಗ ಅಲ್ಲಿ ನಿನಗೊಂದು ತುಳಸೀಮಣಿಗಳ ಮಾಲೆ ಕಾಣಿಸತ್ತದೆ. ಅದರಿಂದ ಒಂದೊಂದೇ ಮಣಿಯನ್ನು ಅನುಸರಿಸುತ್ತಾ ಬೆಟ್ಟ ಹತ್ತಿದರೆ ಕಡೆಯ ಮಣಿ ಇರುವ ಸ್ಥಳದಲ್ಲಿ ನಾನಿರುತ್ತೇನೆ ಎಂದೂ ಹೇಳಿದರಂತೆ."

ಅದರಂತೆ ತಿಮ್ಮಪ್ಪನಾಯಕರು ತನ್ನ ಪರಿವಾರದೊಡನೆ ಅಮರಗಿರಿ ಬೆಟ್ಟದ ಬುಡಕ್ಕೆ ಹೋದಾಗ ಅಲ್ಲಿ ತುಳಸೀಮಣಿಗಳ ಮಾಲೆ ಸಿಗುತ್ತದೆ. ಅದನ್ನನುಸರಿಸಿ ಹೋದಾಗ ಅವರಿಗೆ ಭೂಮಿಯಲ್ಲಿ ಹುದುಗಿರುವ ವೆಂಕಟರಮಣಸ್ವಾಮಿಯ ವಿಗ್ರಹ ದೊರೆಯುತ್ತದೆ. ಅವರು ಅದಕ್ಕೊಂದು ದೇಗುಲ ನಿರ್ಮಿಸುತ್ತಾರೆ. ಮಾಲೆಯನ್ನು ಅನುಸರಿಸಿ ಸಿಕ್ಕಿದ ದೇವರಾದ್ದರಿಂದ ಇದಕ್ಕೆ ಮಾಲೇಕಲ್ಲು ತಿರುಪತಿ ಎಂಬ ಹೆಸರು

ಬಂದಿದೆ. ದೇವಾನುದೇವತೆಗಳು ಇಲ್ಲಿನ ವೆಂಕಟರಮಣಸ್ವಾಮಿಯನ್ನು ದರ್ಶಿಸಲು ಗುಪ್ತ ವಾಗಿ ಬರತ್ತಾರಂತೆ ಹಾಗಾಗಿ ಈ ಬೆಟ್ಟಕ್ಕೆ ಅಮರಗಿರಿ ಎಂಬ ಹೆಸರೂ ಇದೆ. ವಿಶೇಷವೆಂದರೆ ತಿರುಪತಿಯಲ್ಲಿ ವೆಂಕಟರಮಣಸ್ವಾಮಿ ದೇಗುಲ ಬೆಟ್ಟದ ಮೇಲೆ ಪದ್ಮಾವತಿ ದೇಗುಲ ಬೆಟ್ಟದ ಕೆಳಗಡೆ ಇದೆ.

ಆದರೆ ಮಾಲೇಕಲ್ಲು ತಿರುಪತಿಯಲ್ಲಿ ವೆಂಕಟರಮಣಸ್ವಾಮಿ ಹಾಗೂ ಪದ್ಮಾವತಿ ಇಬ್ಬರಿಗೂ ಬೆಟ್ಟದ ಮೇಲೆಯೇ ದೇಗುಲ ನಿರ್ಮಿಸಲಾಗಿದೆ. ಬೆಟ್ಟ ಹತ್ತಲು 1250ಮಟ್ಟಿಲುಗಳ ವ್ಯವಸ್ಥೆಯೂ ಇದೆ. ಬೆಟ್ಟ ಹತ್ತುವಾಗ ಸುತ್ತಲಿನ ಪ್ರಕೃತಿ ಸೌಂದರ್ಯ ವನ್ನೂ ಸವಿಯಬಹುದು ಕಣ್ಮನ ತಣಿಸಿಕೊಳ್ಳಬಹದು. ಮೆಟ್ಟಿಲು ಹತ್ತುವಾಗ ಗೋವಿಂದನ ನಾಮಸ್ಮರಣೆ ಮಾಡಲು ಅನುಕೂಲವಾಗುವಂತೆ , ತಿರುಪತಿಯ ಶ್ರೀವಾರಿ ಮೆಟ್ಟಿಲಿನ ದಾರಿಯಲ್ಲಿ ಬರೆದಿರುವಂತೆ ಉದ್ದಕ್ಕೂ ಗೋವಿಂದ ನಾಮಗಳನ್ನೂ ಬರೆಯಲಾಗಿದೆ.

ಬೆಟ್ಟದ ಬುಡದಲ್ಲಿ ತಿರುಪತಿಯಲ್ಲಿರುವಂತೆ ಗೋವಿಂದರಾಜಸ್ವಾಮಿ ಗುಡಿಯೂ ಇದೆ. ಬೆಟ್ಟ ಹತ್ತಲು ಸಾಧ್ಯವಿಲ್ಲದವರು ಈ ಗೋವಿಂದರಾಜಸ್ವಾಮಿಯನ್ನೇ ದರುಶನ ಮಾಡಿಕೊಳ್ಳುತ್ತಾರೆ.ಈ ಗುಡಿಯ ಪಕ್ಕದಲ್ಲಿ ವಿಶಾಲವಾದ ಕೆರೆಯೊಂದಿದ್ದು ಅದನ್ನು ತಿಮ್ಮಪ್ಪನಾಯಕರ ಕೆರೆ ಎಂದು ಕರೆಯಲಾಗುತ್ತದೆ. ಈ ಗುಡಿಯಲ್ಲಿರುವ ಗೋವಿಂದರಾಜಸ್ವಾಮಿ ವಿಗ್ರಹವು ಈ ಕೆರೆ ನಿರ್ಮಾಣ ಮಾಡುವ ಸಮಯದಲ್ಲಿ ಸಿಕ್ಕಿದ್ದೆಂದೂ ಕೆಲವರು ಹೇಳುತ್ತಾರೆ. ಬೆಟ್ಟದ ಮೇಲಿನ ವೆಂಕಟರಮಣಸ್ವಾಮಿಯ ಉತ್ಸವ ವಿಗ್ರಹಗಳನ್ನು ಗೋವಿಂದರಾಜಸ್ವಾಮಿ ಗುಡಿಯಲ್ಲಿ ಇರಿಸಲಾಗಿದೆ. ಬೆಟ್ಟದ ಜಾತ್ರೆ ಉತ್ಸವಗಳನ್ನು ನಿರ್ವಹಿಸಲು ಜನರು ಬೆಟ್ಟ ಹತ್ತಲು ಕಷ್ಟವಾಗುತ್ತದೆ ಎಂದು ದೇಗುಲಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ಉತ್ಸವಗಳನ್ನು, ಜಾತ್ರೆಯನ್ನು ಕೆಳಗಿನ ಗೋವಿಂದರಾಜಸ್ವಾಮಿ ದೇವಾಲಯದಲ್ಲಿಯೇ ನಿರ್ವಹಿಸುತ್ತಾರೆ. ಆಗ ಈ ದೇವರಿಗೆ ನಡೆದುಕೊಳ್ಳುವ ಹಲವಾರು ಊರುಗಳ ಜನ ಸಾಗರದಂತೆ ನೆರೆಯುತ್ತಾರೆ.

ವಶಿಷ್ಠ ಮಹರ್ಷಿಗಳು ತಪಸ್ಸು ಫಲಿಸಿ ವೆಂಕಟರಮಣಸ್ವಾಮಿಯು ದರುಶನ ಭಾಗ್ಯ ಪಡೆದದ್ದು ಆಷಾಢ ಮಾಸದ ದ್ವಾದಶಿಯಂದು ಅದೇ ದಿನದಂದು ಪ್ರತಿವರ್ಷವೂ ಜಾತ್ರೆ ನಡೆಲಾಗುತ್ತದೆ. ನವದಂಪತಿಗಳು ಈ ದೇಗುಲ ದರ್ಶಿಸಿದರೆ ಅವರ ಮುಂದಿನ ಜೀವನ ಸುಖಮಯವಾಗಿರುತ್ತದೆ ಎಂದು ಈ ದೇಗುಲಕ್ಕೆ ನಡೆದುಕೊಳ್ಳುವವರ ನಂಬಿಕೆ.

೫. ಗೌರಿ ಭಟ್ಟ.

ಬೀದಿ ನಾಯಿಗಳ ಲೋಕದಲ್ಲಿ

ಒಮ್ಮೆ ನಾನು ಮಂಗಳೂರು ವಿಮಾನ ನಿಲ್ದಾಣದಲ್ಲಿ ಒಬ್ಬಳು ಶ್ರೀಮಂತ ಯುವತಿ ನಾಯಿಮರಿ ಮುದ್ದಾಡುವುದನ್ನು ನೋಡಿ ಅಬ್ಬಾ! ಮುಂದಿನ ಜನ್ಮದಲ್ಲಿ ಹುಟ್ಟುವಂತಿದ್ದರೆ ನಾಯಿಮರಿ ಆಗಿ ಹುಟ್ಟಬೇಕುಅನ್ನಿಸಿತ್ತು. ಆದರೆ ಬಸ್ಸ್ಟಾಂಡಿನಲ್ಲೋ, ಬೀದಿಯಲ್ಲೋ ವಾಸಿಸುವ ನಾಯಿಪಾಡು ಯಾರಿಗೂ ಬೇಡ.

ಕೆಲವರು ನಾಯಿಮರಿಯನ್ನು ಪ್ರೀತಿಯಿಂದ ಸಾಕಿ ಇಳಿವಯಸ್ಸಿನಲ್ಲಿ ಇನ್ನೊಂದು ಬೀದಿಗೆ ಬಿಟ್ಟು ಹೋಗುತ್ತಾರೆ. ಇನ್ನು ಕೆಲವೊಮ್ಮೆ ಬಾಡಿಗೆ ಮನೆಯಲ್ಲಿರುವವರು ಬೇರೆ ಊರಿಗೆ ವರ್ಗವಾಗಿ ಹೋಗುವಾಗ ತಮ್ಮ ಸಾಕುನಾಯಿಯನ್ನು ಅಲ್ಲಿಯೇ ಬಿಟ್ಟು ಹೋಗುತ್ತಾರೆ.

ನಮ್ಮ ಬೀದಿಯಲ್ಲೂ ಹಾಗೇ ಸೇರಿಕೊಂಡ ಆರು ನಾಯಿಗಳಿವೆ. ದಿನಾ ಬೆಳಿಗ್ಗೆ ರಸ್ತೆಗೆ ಇಳಿಯುವಾಗ ಕಾಣುವ ಈ ನಾಯಿಗಳಿಗೆ ನನ್ನದೇ ನಾಮಕರಣ.ಅವುಗಳ ಕುರಿತಾಗಿಯೇ ನನ್ನ ಇಂದಿನ ದಾಸೋಹದ ಪ್ರಸ್ತುತಿ.

ಲೋಕೋ ಭಿನ್ನ ರುಚಿ: ಅನ್ನುವುದು ಮನುಷ್ಯರಿಗೆ ಮಾತ್ರ ಅನ್ವಯಿಸುತ್ತದೆ, ಅಂದು ಕೊಂಡಿದ್ದೆ.ಆದರೆ ಬೀದಿ ನಾಯಿಗಳಿಗೂ ಅನ್ವಯಿಸುತ್ತದೆ ಎಂಬುದು ಇತ್ತೀಚೆಗೆ ಅರಿವಿಗೆ ಬಂತು. ರೂಪದಲ್ಲೂಗುಣದಲ್ಲೂ ಒಂದೊಂದೂ ಬೇರೆ, ಬೇರೆಯೇ.

ನಮ್ಮ ಬೀದಿಯ ನಾಯಿಗಳ ಬಗ್ಗೆ ಹೇಳುವುದಾದರೆ,

೧. ಕಪ್ಪು, ಬಿಳಿ ಬಣ್ಣದ ಟಿಂಕು ನಾಯಿಯನ್ನು ಪಕ್ಕದ ಮನೆಗೆ ಬಾಡಿಗೆಗೆ ಇದ್ದವರು ಹೋಗುವಾಗ ಬೀದಿಯಲ್ಲೇ ಬಿಟ್ಟು ಹೋಗಿದ್ದರು.ತುಂಬಾ ಸಮಯ ಅದು ತನ್ನ ಮನೆಯವರನ್ನು ನೆನಪಿಸಿಕೊಂಡು ಸಂಕಟ ಪಡುತ್ತಿತ್ತು.ಈಗ ಅದು ಬೀದಿ ನಾಯಿಯೇ ಆಗಿಬಿಟ್ಟಿದೆ.

೨. ಚಪ್ಪಲಿ ಕಳ್ಳಿ.

ಯಾರದೇ ಮನೆಯ ಗೇಟ್ ತೆಗೆದಿರಲಿ, ಕ್ಷಣಮಾತ್ರದಲ್ಲಿ ಚಪ್ಪಲಿ ಕಚ್ಚಿಕೊಂಡು

ಬರುತ್ತದೆ.ಬಾಯಿಯಲ್ಲಿ ಕಚ್ಚಿ ಎಳೆದಾಡಿ ರಸ್ತೆಬದಿಯ ಒಂದು ಕಲ್ಲಿನ ಮೇಲೆ ಇಟ್ಟು, ನೆನಪಾದಾಗಲೆಲ್ಲ ಹೋಗಿ ಚಪ್ಪಲಿ ಜೊತೆ ಆಟ ಆಡುತ್ತದೆ.ಬೇರೆನಾಯಿಗಳಿಗೆ ಅದನ್ನು ಮುಟ್ಟಲು ಬಿಡುವುದಿಲ್ಲ.ಒಂದು ದಿವಸ ಓಡಿ ಹೋಗಿ ಪಕ್ಕದ ಮನೆಯ ಚಂಪಾಳ ಹೊಸ ಚಪ್ಪಲಿ ತಂದಳು ಚಪ್ಲೀ ಕಳ್ಳಿ!.ಇನ್ನೂ ಚಪ್ಪಲಿ ಹಾಳು ಮಾಡಿರಲಿಲ್ಲ.ಚಂಪಾಳನ್ನು ಕರೆದು ಹೇಳಿದೆ. ಅವಳು ಚಪ್ಪಲಿ ತರಲು ಹೋದಾಗ ಅದು ತನ್ನದೇ ಎಂಬಂತೇ ಅವಳಿಗೆ ಕೊಡದೇ ಗುರಾಯಿಸುತ್ತಿತ್ತು.

೩. ಬೆಳ್ಳಿ .

ಶ್ವೇತಸುಂದರಿ. ಯಾರ ಹತ್ತಿರವೂ ಗಲಾಟೆ ಇಲ್ಲ.ಬೇರೆ ಯಾರಾದರೂ ಗಲಾಟೆ ಮಾಡಿಕೊಂಡರೆ ತುಂಬಾ ಬೇಸರ ಮಾಡಿಕೊಳ್ಳುತ್ತದೆ.ಗಲಾಟೆ ಮಾಡಿದವರ ಸಂಧಾನಕ್ಕೂ ಮುಂದಾಗಿ ಹೋಗುತ್ತದೆ.ಅದಕ್ಕೆ ಮಾರಿ ಬಿಸ್ಕತ್ತು ತುಂಬಾ ಇಷ್ಟ.

೪. ಕರಿಯ .

ಸಂಕೋಚಸ್ವಭಾವದವ.ಹಾಕಿದ್ದನ್ನು ಗಬಗಬನೆ ತಿನ್ನುವವನಲ್ಲ.ಎಲ್ಲರಿಗೂ ಊಟ ಆದ ಮೇಲೆ ಮಿಕ್ಕಿದ್ದನ್ನು ತಿನ್ನುತ್ತಾನೆ.ಮೀನಿನ ಊಟದ ಮೇಲೆ ವಿಶೇಷ ಆಸೆ.

೫. ಕುಂಟಜ್ಜ .

ಹಿರಿಯ ನಾಗರೀಕ, ಪಕ್ಕದ ಬೀದಿಯ ಶುಭಾಅಕ್ಕನ ಮನೆಯ ನಾಯಿ. ಅವರ ಮನೆಯಲ್ಲಿ ಅಲ್ಸೇಷಿಯನ್ ತಳಿಯ ನಾಯಿಮರಿ ಸಾಕಿದ ಮೇಲೆ ಕುಂಟಜ್ಜನನ್ನು ಎಲ್ಲೋ ಬಿಟ್ಟು ಬಂದಿದ್ದರು.ಒಂದು ವರ್ಷದ ನಂತರ ,ಅವನ ಮನೆಯನ್ನು ಹುಡುಕಿಕೊಂಡು ವಾಪಸು ಬಂದಿದ್ದ.ಆದರೆ ಶೋಭಾ ಅಕ್ಕನಮನೆಯ ಹೊಸ ನಾಯಿ ಅಲ್ಲಿಗೆ ಹೋಗಲು ಕುಂಟಜ್ಜನಿಗೆ ಬಿಡುವುದಿಲ್ಲ ಹಾಗೂ ಅವರ
ಮನೆಯವರಿಗೂ ಅದು ಬೇಡವಾಗಿದೆ. ಹಾಗಾಗಿ ಕುಂಟಜ್ಜ ಬೀದಿಯಲ್ಲೇ ಖುಷಿಯಿಂದ, ಸ್ವತಂತ್ರವಾಗಿ ಬದುಕುತ್ತಿದ್ದಾನೆ.

೬.ಬ್ರೌನಿ.

ಗೋಲ್ಡನ್ ರಿಟ್ರೈವರ್. ನಾಯಿ.ತುಂಬಾಸಾಧು.ಕಂದುಬಣ್ಣದ ಜಾತಿ ನಾಯಿ.ಯಾರೋ ಬೀದಿಯಲ್ಲಿ ಬಿಟ್ಟು ಹೋಗಿದ್ದಾರೆ..ಯಾರಾದರೂ ಮನೆಯ ಗೇಟ್ ತೆಗೆದರೆ ಸಾಕು.ಹಿಂದಿನ ಕಾಲಿನಮೇಲೆ ನಿಂತು ಬ್ಯಾಲೆನ್ಸ್ ಮಾಡಿಕೊಂಡು ಡ್ಯಾನ್ಸ್ ಮಾಡಿ ಅವರನ್ನು ಮರಳುಮಾಡುತ್ತೆ.ಏನಾದರೂ ತಿನ್ನಲು ಕೊಡಲೇಬೇಕು. ಮೂಳೆ ತುಂಡು ಕಂಡರೆ ಇನ್ನೂ ಕುಣಿಯುತ್ತೆ.

ಒಂದು ದಿನ ಬೆಳಿಗ್ಗೆ ವಾಕಿಂಗಿಗೆ ಹೋಗುತ್ತಿರುವಾಗ ಕಪ್ಪು ಬಿಳಿ ಬಣ್ಣದ ನಾಯಿ ಮರಿ ರಸ್ತೆಯ ಬದಿಯಲ್ಲಿ ಕುಳಿತಿತ್ತು.ನನ್ನನ್ನು ನೋಡಿ ಬೊಗಳಿತು.ಅಲ್ಲೇ ಬರುತ್ತಿದ್ದ ನನ್ನ ಗೆಳತಿ ಪ್ರೇಮಾರವರು ಅದನ್ನು ನೋಡಿ ," ಓಹ್, ಇದು ಪಕ್ಕದ ಓಣಿಯ ಕಾಮತರ ಮನೆಯ ನಾಯಿನಾಯಿ.ನಾಲ್ಕು ಮರಿಗಳಲ್ಲಿ ಉಳಿದ ಒಂದು ಹೆಣ್ಣು ಮರಿಯನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ ನೋಡಿ,. ಎಂದು ಕೂಡಲೇ ,ಕಾಮತರಿಗೆ ಫೋನ್ ಮಾಡಿ ವಿಷಯ ತಿಳಿಸಿದರು.ಅವರೇ ಬಂದು ನಾಯಿಮರಿಯನ್ನು ಕರೆದುಕೊಂಡು ಹೋದಾಗ ನಮ್ಮ ಬೀದಿನಾಯಿಯ ಸಂಖ್ಯೆ ಏಳಕ್ಕೆ ಏರದೇ ಆರಕ್ಕೇ ಉಳಿಯಿತೆಂಬುದು ಸಮಾಧಾನದ ವಿಷಯ.

"ಬಾಯಿ ತನುವನ್ನೂ, ನಾಯಿ ಮನೆಯನ್ನೂ ಕಾಯುತ್ತದೆ " ಎಂಬ ಮಾತಿದೆ. ನಮ್ಮ ಬೀದಿನಾಯಿಗಳೂ "ಗ್ರಾಮಸಿಂಗ"ಗಳಂತಿದ್ದು ನಮ್ಮ ಬೀದಿಯನ್ನು ಕಾಯುತ್ತಿವೆ.

೬. ಎನ್.ಶಂಕರ ರಾವ್.

ಚೈತ್ರದ ಚಿಗುರು

ವಸಂತ ಋತುವಿನ ಮುನ್ನುಡಿ ಯುಗಾದಿ,
ಬೆಸೆದು ಭಾವೈಕ್ಯತೆ, ಸವಿದು ಬೇವು ಬೆಲ್ಲ,
ಹೊಸ ಶ್ರೀಶೋಭಕೃನ್ನಾಮ ಸಂವತ್ಸರದಲಿ,
ಹೊಸ ಮನ್ವಂತರಕೆ ಹಾಡೋಣ ನಾಂದಿ. .೧.

ಎಲ್ಲೆಡೆ ಹಸಿರು ಚಿಗುರಿ
ಮಲ್ಲಿಗೆ ಕೇದಿಗೆ, ಜಾಜಿ ಸಂಪಿಗೆ,
ಹಲಸು ಮಾವು ಸಮೃದ್ಧಿಸಲಿ,
ಭುವಿಯಲಿ ಚೈತ್ರದ ಚಿಗುರಲಿ. .೨.

ಮತ್ತೆ ಬಂದಿದೆ ವಸಂತ,
ಋತುಗಳ ರಾಜ ಧೀಮಂತ
ಸುತ್ತಲೂ ಹಸಿರು ತೋರಣ ಸೀಮಂತ,
ನಿತ್ಯ ಹಸಿರಿನೋಕುಳಿಯಿತ್ತ ಪ್ರಕೃತಿದತ್ತ. .೩.

ಶಿಶಿರ ಋತು ಕಳೆದು ,
ಸುಷಿರ ನಾದ ಬಾಳಲಿ ,
ಸುಷುಪ್ತಿ ಮನದಲಿ ಕನಸು ಚಿಗುರಿ,
ಸುಶ್ರಾವ್ಯ ಪಂಚಮಸ್ವರ ವಸಂತಾಗಮನದಲಿ. .೪.

ಹೊಂಗೆಯ ಮರದ ನೆರಳು ,
ಯುಗಾದಿ ಬೆಸೆದ ಒಲವು,
ಕೋಗಿಲೆಯ ಇನಿದನಿ ಸೇರಿ,
ಶೃಂಗಾರದ ಅನುರಾಗದ ಸಂಭ್ರಮ. ,೫.

ನವ ಸಂವತ್ಸರದ ಆರಂಭ
ನವ ವರುಷದ ಹರುಷ,
ನವೋದಯ ಎಲ್ಲೆಡೆ ಕಾಣಲು,
ನವೋಲ್ಲಾಸ ತುಂಬಲಿ ಎಲ್ಲರ ಮನ ಮನೆಯಲಿ.

೭. ನಾಗರತ್ನ ಚಂದ್ರಶೇಖರ್

ಹೀಗೂ ಉಂಟು

ಕಳೆದ 12 ತಿಂಗಳಲ್ಲಿ ನಾಲ್ಕು ಸಾರಿ ಚಾಮರಾಜಪೇಟೆಯ ರುದ್ರ ಭೂಮಿಯಲ್ಲಿ ಕುಟುಂಬದ ನಾಲ್ವರು ಸದಸ್ಯರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕಾದ ಅನಿವಾರ್ಯತೆ ಒದಗಿತ್ತು. ಸ್ಮಶಾನದಲ್ಲಿ ಕಾಯುವುದು ಅಷ್ಟು ಸುಲಭದ ಸಂಗತಿಯಲ್ಲ, ಮೃತ ದೇಹದ ಆಗಮನಕ್ಕಾಗಿ ಕೆಲವು ಸಾರಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಅಲ್ಲಿ ಬೇಸರ ಕಳೆಯಲು ಓಡಾಡುವುದಾದರೂ ಎಲ್ಲಿ? ಕಿರದಾದ ಜಾಗಗಳ ಮಧ್ಯೆ ಕಾಲಾಡಿಸುತ್ತಾ ಹೋಗುತ್ತಾ ಅಲ್ಲಿ ಶಾಶ್ವತವಾಗಿ ಮಲಗಿದವರ ಹೆಸರುಗಳನ್ನು ಓದತೊಡಗಿದ್ದೆ. ಹಾಗೆ ಓದುತ್ತಾ ಓದುತ್ತಾ ಹೋಗುವಾಗ ಕೆಲವೊಂದು ಕಲ್ಲುಗಳ ಮೇಲೆ ಬಿಡಿಸಿದ್ದ ಭಾವಚಿತ್ರಗಳನ್ನು ನೋಡುತ್ತಾ ಹುಟ್ಟು ಸಾವುಗಳ ಲೆಕ್ಕ ಬರೆದ ಸಮಾಧಿಗಳ ಮೇಲಿನ ಬರಹಗಳನ್ನು ನೋಡಿದೆ . ಆಗ ಅಚಾನಕ್ಕಾಗಿ ನನ್ನ ಗಮನ ಒಂದು ಕಲ್ಲಿನ ಮೇಲೆ ನೆಟ್ಟಿತು. ಹೌದು ,ಅದು ನನ್ನದೇ ಹೆಸರು! ಇನ್ಸಿಯಲ್ ಕೂಡ ಅದೇ! ಅರೆ ವಾಹ್, ಎಂತಹ ಸೋಜಿಗ! ಬದುಕಿರುವಾಗಲೇ ನನ್ನ ಹೆಸರಿನ ಸಮಾಧಿಯನ್ನು ನೋಡಿದೆನಲ್ಲ! ನನ್ನ ಪರಿಚಯ ಇದ್ದವರು ಯಾರಾದರೂ ಅಕಸ್ಮಾತ್ ಇಲ್ಲಿಗೆ ಬಂದರೆ ಖಂಡಿತ ಇದನ್ನು ನೋಡಿ ನನ್ನ ಸಾವಿನ ವಿಷಯ ತಿಳಿದು ಶ್ರದ್ಧಾಂಜಲಿ ಅರ್ಪಿಸಬಹುದೇ ಹಾಗೂ ನಮ್ಮ ಮನೆಗೆ ಫೋನ್ ಮಾಡಿ ಏನಾದರೂ ವಿಷಯ ಸಂಗ್ರಹಿಸಲು ವಿಚಾರಿಸಿದಾಗ ನನ್ನದೇ ಧ್ವನಿಯನ್ನು ಕೇಳಿ ಅವರಿಗೆ ಮತ್ತೊಮ್ಮೆ ಶಾಕ್ ಆಗಬಹುದು .ಇದನ್ನೆಲ್ಲಾ ನೆನೆದು ನಗೆಯುಕ್ಕಿತು. ಹಾಗೆಯೇ ನನಗೆ ಇನ್ನೊಂದು ವಿಷಯವೂ ನೆನಪಾಯಿತು ಈಗಾಗಲೇ ನಾನು ಅನೇಕರ ಶ್ರದ್ಧಾಂಜಲಿ ಸಭೆಯಲ್ಲಿ ನಾನು ಬರೆದು ಓದಿದ ಅತ್ಯಂತ ಅಂತ ಕರಣ ಪೂರಿತ ಸವಿ ನೆನಪುಗಳ ಬರಹವನ್ನು ಕೇಳಿದ್ದ ಎಲ್ಲರ ಕಣ್ಣಂಚುಗಳು ಒದ್ದೆಯಾಗಿದ್ದವು ಹೌದು ನನ್ನ ಸಾವಿನ ನಂತರ ನನಗಾಗಿ ಹೀಗೆ ಯಾರಾದರೂ ಬರೆಯಬಲ್ಲರೆ ಎನಿಸಿತು .ಅದಕ್ಕಾಗಿ ನಾನೇ ನನಗಾಗಿ ಒಂದು ಶ್ರದ್ಧಾಂಜಲಿಯನ್ನು ಬರೆದರೆ ಒಳ್ಳೆಯದು ಎಂದು ಎಲ್ಲರೂ ಹತ್ತಿರ ಹೇಳಿ ಜೋಕ್ ಮಾಡಿದ್ದೆ.

ಆಂಗ್ಲ ಕವಿ ಒಬ್ಬರು ತಮ್ಮ ಸಮಾಧಿ ಕಲ್ಲಿನ ಮೇಲೆ ಬರೆಯಬೇಕೆಂದು ಕವನ ಒಂದನ್ನು ಮೊದಲೇ ಸಿದ್ಧಪಡಿಸಿ ಇಟ್ಟಿದ್ದು ಓದಿದ್ದ ನೆನಪಾಯಿತು ಕೂಡ

ಹದ್ದು ಹಾರಿಸಿದ ದಾವಣಿ

ಇದೇ ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನ ಜನರಿಗೆ ಆಕಾಶದ ಅಂಗಳದಲ್ಲಿ ಹಾರಾಡುವ ಹತ್ತಾರು ಬಗೆಯ ವಿಮಾನಗಳು ಬಿಡಿಸುವ ಚಿತ್ತಾರವನ್ನು ನೋಡಿ ಆನಂದಿಸುವ

ಸಮಯ. ಖುದ್ದು ನೋಡಲಾಗದವರು ಟಿವಿ ಪರದೆಯಲ್ಲಾದರೂ ನೋಡಿ ಖುಷಿಗೊಳ್ಳಬಹುದು.
ಫೆಬ್ರವರಿ 14 ,20೨೩ ರ ಬೆಳಿಗ್ಗೆ ಘಟಿಸಿದ ಒಂದು ಸ್ವಾರಸ್ಯಕರ ಪ್ರಸಂಗದ ವರದಿ ಇಲ್ಲಿದೆ.

ಪುಷ್ಪಾಂಜಲಿ ನಗೆ ಕೂಟದ ಸದಸ್ಯರು ಎಂದಿನಂತೆ ಬೆಳಗಿನ ವ್ಯಾಯಾಮಕ್ಕೆಂದು ಪಾರ್ಕಿನ ಪಕ್ಕದ ಮೈದಾನಕ್ಕೆ ಹೋಗಿ ನಮ್ಮ ನಮ್ಮ ಸ್ಥಳಗಳಲ್ಲಿ ನಿಂತು ಪ್ರಾಣಾಯಾಮ ಮಾಡಲು ಪ್ರಾರಂಭಿಸಿದೆವು ನಮ್ಮ ಅಂದಿನ ಆಂಕರ್ ರೂಪರಾಣಿ ಕೂಡ ಎಂದಿನಂತೆ ತನ್ನ ದಾವಣಿಯನ್ನು ತೆಗೆದು ಕಲ್ಲಿನ ಮೇಲಿಟ್ಟು ಬಂದರು. ಅದಾಗಲೇ ಬೆಳಗಿನ ಸೂರ್ಯ ಕಿರಣ ಮರಗಳ ಸಂಧಿಗಳಿಂದ ತೂರಿ ಬರಲು ಪ್ರಾರಂಭಿಸಿದ್ದವು. ಹಕ್ಕಿಗಳ ಚಿಲಿಪಿಲಿ ನಾದವು ಕೂಡ ಕಿವಿಗೆ ಇಂಪಾಗಿತ್ತು. ಆಗಾಗ ತನ್ನ ಸಂತಾನಾಭಿವೃದ್ಧಿಗಾಗಿ ಕಟ್ಟಬೇಕಾಗಿರುವ ಪುಟ್ಟ ಗೂಡಿಗೆ ಬೇಕಾಗುವ ಕಡ್ಡಿಗಳನ್ನು ಸಂಗ್ರಹಿಸಲು ಹದ್ದುಗಳು ಆಗಾಗ ಮೈದಾನಕ್ಕೆ ಬರುತ್ತಿದ್ದವು. ಸುತ್ತಮುತ್ತಲಿದ್ದ ಮರಗಳ ಕಡ್ಡಿಗಳು ,ಎಲೆಗಳು ಸಾಕಷ್ಟು ಮೈದಾನದಲ್ಲಿ ಸಂಗ್ರಹವಾಗುತ್ತಿದ್ದವು ಕೂಡ. ಅಂದು ಕೂಡ ಹೀಗೆ ಹಾರಿ ಬಂದ ಹದ್ದೊಂದರ ಬಾಯಲ್ಲಿ ಕಡ್ಡಿಯ ಜೊತೆಗೆ ರೂಪರಾಣಿಯ ದಾವಣಿ ಕೂಡ ಕಾಲಿಗೆ ಸುತ್ತಿಕೊಂಡು ಬಿಟ್ಟಿತ್ತು ಅದನ್ನು ಬಿಡಿಸಿಕೊಳ್ಳಲಾರದೆ ಹದ್ದು ದಾವಣಿ ಸಮೇತ ಆಕಾಶಕ್ಕೆ ಹಾರತೊಡಗಿತು ನಾವೆಲ್ಲ ಅನಿರೀಕ್ಷಿತವಾದ ಈ ಆಶ್ಚರ್ಯಕರ ಘಟನೆಗೆ ಬೆರಗಾಗಿ ಬಾಯಿ ಬಿಟ್ಟುಕೊಂಡು ನೋಡಿದ್ದೇ ಬಂತು, ಹದ್ದು ಹಾರತ್ತಲೇ ಮುಂದೆ ಮುಂದೆ ಆಕಾಶದಲ್ಲಿ ಹೋಗುತ್ತಿತ್ತು ಹಿಂದೆ ಹಿಂದೆ ದಾವಣಿಯು ಗಾಳಿಪಟದಂತೆ ಅದರ ಜೊತೆಗೆ ಹಾರುತ್ತಿತ್ತು ಈ ಅಪರೂಪದ ದೃಶ್ಯ ನೋಡುತ್ತಾ ನಾವೆಲ್ಲ ಒಂದು ಕ್ಷಣ ಬೆರಗಾಗಿದ್ದೆವು ಕೂಡ .

ಹೀಗೆ ಹಾರುತ್ತಾ ಮುಂದಿನ ಬೀದಿಯ ದೊಡ್ಡ ದೊಡ್ಡ ಕಟ್ಟಡಗಳ ಮೇಲೆ ಕೂತಿದ್ದು ನಮಗೆ ದೂರದಿಂದ ಕಾಣಿಸಿತ್ತು. ಅಲ್ಲಿ ಎಲ್ಲಿಯಾದರೂ ದಾವಣಿ ಬೀಳಿಸಿದ್ದರೆ ಕೂಡ ನಮಗೆ ಸಿಗುವ ಸಂಭವ ಇರಲಿಲ್ಲ ರೂಪರಾಣಿ ತನ್ನ ತನ್ನ ವೇಲು ಹೀಗೆ ಹಾರಿ ಹೋದ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾ ನಿಂತಿದ್ದರೆ ಹೊರತು ನಾವುಗಳು ಯಾರು ಏನು ಸಹಾಯ ಮಾಡುವಂತಿರಲಿಲ್ಲ ಆಶ್ಚರ್ಯವೆಂದರೆ ಕೆಲವೇ ನಿಮಿಷಗಳಲ್ಲಿ ಮತ್ತೆ ಅದೇ ಹದ್ದು ಹಾರಿ ಬರುತ್ತಿರುವುದು ನಮಗೆ ಕಾಣಿಸಿತು ಅದರ ಹಿಂದೆ ಬಾಲಂಗೋಚಿಯಂತೆ ದಾವಣಿ ಸಹ ಹಾರುತ್ತಾ ಇತ್ತು .ಮತ್ತೆ ನಾವೆಲ್ಲ ಹರ್ಷೋದ್ಗಾರ ಮಾಡುತ್ತಾ ನೋಡುತ್ತಲೇ ಇದ್ದೆವು. ಹದ್ದು ಹಾರುತ್ತಾ ಹಾರುತ್ತಾ ಪಾರ್ಕಿನೊಳಗೆ ಒಂದು ಸುತ್ತು ಹಾಕಿ ಅಲ್ಲಿ ತನ್ನ ಕಾಲಿಗೆ ಅಂಟಿಕೊಂಡಿದ್ದ ದುಪ್ಪಟದಿಂದ ಮುಕ್ತಿ ಪಡೆಯಿತು ಅದಕ್ಕೂ ದಾವಣಿಯನ್ನು ಹೊತ್ತು ತಿರುಗಾಟ ಮುಜುಗರವಾಗಿರಬೇಕು ಗೂಡಿಗೆ ಶೃಂಗಾರ ಮಾಡಲಂತೂ ಅದು ಉಪಯೋಗವಿರಲಿಲ್ಲ, ವಾಪಸ್ಸು ಕೊಡಬೇಕೆಂಬ ಮನಸಾದರೂ ಅದಕ್ಕೆ ಬಂದದ್ದು ಎಲ್ಲಿಂದ? ಅದು ಅಚಾತುರ್ಯವಾಗಿ ಕಾಲಿಗೆ ಸಿಕ್ಕಿಕೊಂಡ ಜಾಗದಲ್ಲೇ ಅದನ್ನು ಬೀಳಿಸುವ ಒಳ್ಳೆಯ ಪ್ರಯತ್ನ ಮಾಡಿದ ಅದರ

ಬುದ್ಧಿವಂತಿಕೆಗೆ ಒಂದು ದೊಡ್ಡ ನಮಸ್ಕಾರ. ಈಗ ರೂಪ ರಾಣಿಗೆ ಪಾರ್ಕಿಗೆ ಧಾವಿಸುವ ಹಾಗೂ ದಾವಣಿಯನ್ನು ತೆಗೆದುಕೊಳ್ಳುವ ಅವಸರ.

ವಾವ್ ಬೆಳ್ಳಂ ಬೆಳಗ್ಗೆ ಅಂದು ಒಂದು ಸುಂದರ ದೃಶ್ಯ ಕಾವ್ಯವನ್ನು ಸೃಷ್ಟಿಸಿದ ಹದ್ದಿಗೆ ನಗೆಕೂಟದ ಚಪ್ಪಾಳೆ ಅಂತೂ ಗಿಟ್ಟಿತು. ಹದ್ದಿನ ಜಾಣತನವನ್ನು ಎಲ್ಲರೂ ಕೊಂಡಾಡಿದೆವು ಈಗ ಶುರುವಾಗಿದ್ದು ಮತ್ತೊಂದು ಚರ್ಚೆ .ಹದ್ದು ಹಾರಿಸಿದ ದಾವಣಿಯ ಫಲಾಫಲಗಳ ವಿಮರ್ಶೆ. ಅದು ಶುಭ ಶಕುನ ವೆಂದು ಎಲ್ಲರೂ ಸಮಾಧಾನ ಹೇಳಿದೆವು ಒಬ್ಬರಂತೂ ಪುರೋಹಿತರನ್ನು ನಾಳೆ ಕೇಳಿ ಬರಬೇಕು ಎಂದದ್ದು ಉಂಟು. ನಾವೆಲ್ಲ ಕಾಫಿ ಸಮಾರಾಧನೆ ಆಗಲಿ ದಾವಣಿ ಸಿಕ್ಕಿದ್ದಕ್ಕೆ ಎಂದೆವು. ಹದ್ದು ದಾವಣಿ ಹಾರಿಸಿಕೊಂಡು ಹೋದ ಕಾರಣ ಹೀಗೂ ಇರಬಹುದೇ ಎಂದು ನನ್ನ ಕವಿ ಮನ ಆಲೋಚಿಸಿತು. ಸಂಗಾತಿಗೆ ಸೀಮಂತ ಮಾಡಲು ಸೀರೆ ತರುವ ಬದಲು ದಾವಣಿಯನ್ನಾದರೂ ಕೊಡಬೇಕೆಂದು ಅದು ಆಲೋಚಿಸಿರಬಹುದು ಆದರೆ ಮೂಗಿಗಿಂತ ಮೂಗುತಿ ಬಾರ ಎನಿಸಿ ಅದನ್ನು ಮತ್ತೆ ಕೆಳಗೆ ಹಾಕಲು ಪ್ರಯತ್ನಪಡುತ್ತಾ ಮತ್ತೆ ನಾವಿದ್ದ ಜಾಗವನ್ನೇ ಹುಡುಕಿಕೊಂಡು ಬಂದ ಜಾಣಹದ್ದಿಗೆ ನಾವು ಧನ್ಯವಾದ ಹೇಳಲೇಬೇಕಲ್ಲವೇ.? ನಿಜಕ್ಕೂ ಈ ಪ್ರಸಂಗ ನಮ್ಮ ನಗೆ ಕೂಟದ ಸದಸ್ಯರ ನೆನಪಿನಲ್ಲಿ ಬಹುಕಾಲ ಉಳಿಯುವಂತಿದೆ

೮. ರಾಧಿಕಾ ವಿ ಗುಜ್ಜರ್

ಸುಂದರಿಯರು ಇವರು
ಚೈತ್ರದಲರುಗಳು ಇವರು

ಆರು ಮನೆಯ ಕಸ, ಮುಸರೆ, ಬಟ್ಟೆ ಕೆಲಸ
ನೀರಿಗೆ ನೆನೆದು ಕಾಲ್ಬೆರಳಿಗೆ ಹುಳುಗಳ ಕಾಟ
ಮಾತು ಮಾತು ಮುಗಿಯದ ಪ್ರಶ್ನೆಗಳ ಸಜೆ
ಘಲ್ಲೆನ್ನುವ ಇಂಚಗಲದ ಕಾಲ್ಗೆಜ್ಜೆ ಬೇರೆ
ಸುಂದರಿ ಇವಳು

ಬೆಳಗಾ ಮುಂಜಾನೆ ಆರಾಗೋ ಹೊತ್ತಿಗೆಲ್ಲ
ಬುಟ್ಟಿಗಳ ಜೋಡಿಸಿ, ತುಂಬಿ ಮೀನುಗಳೆಲ್ಲ
ಹಲಗೆ, ಕತ್ತಿ, ಕಲ್ಲು, ಬ್ರಷ್, ಸಂಚಿ ಸಮೇತ
ಕಚ್ಚೆ ಹಾಕಿ ಮುಡಿದು ಸಂಪಿಗೆ, ಶುರು ಮಾರಾಟ
ಸುಂದರಿ ಇವಳು

ಮುನಿಸಿಪಾಲಿಟಿಯ ಬಿಲ್ಲೆ ಪೌರಕಾರ್ಮಿಕಳು
ದಪ್ಪ ದೊಗಲೆ ಶರ್ಟು, ಬೆವರಿ ತೊಪ್ಪೆಯು
ಅಂಗೈಯಿಡೀ ಬರ್ಲಿನ ತರಚು ಗಂಟುಗಳು
ಮುಂಗೈ ತುಂಬಾ ಸದಾ ಹೊಳೆವ ಬಳೆಗಳು
ಸುಂದರಿ ಇವಳು

ಬಾಣಂತಿ ಮಗುವಿನ ಆರೈಕೆಯ ದಾದಿ
ಮಾಲೀಶು, ಲೇಪ, ಧೂಪ, ಚೊಕ್ಕಟ ಆದಿ
ಸಹನೆಯ ಪಣಕ್ಕಿಟ್ಟ ಅವಿಶ್ರಾಂತ ಕೆಲಸ
ಹಣೆಯಲ್ಲಿ ಶೋಭಿಸುವ ಕಾಸಿನಗಲದ ತಿಲಕ
ಸುಂದರಿ ಇವಳು

ಅಳತೆ, ಕತ್ತರಿಸು, ಹೊಲಿ ಕೌಶಲದವಳು
ಕೊರಳಿಗೆ ಟೇಪೇರಿಸಿ ಮಾತಲ್ಲೇ ಜೋಡಿಸುವಳು
ದಿರಿಸುಗಳ ರಂಗಲ್ಲೇ ಸೂಜಿಯ ಸವೆಸಿದವಳು
ಹೊಟ್ಟೆಗೆ ಹಿಟ್ಟು ಮರೆತರೂ ಉಗುರಿಗೆ ಪಾಲಿಶು
ಸುಂದರಿ ಇವಳು

ಬಿಡಿಸಿ ಒಂದೊಂದೇ ಗಂಟು, ಇಸ್ತ್ರೀ ಶುರು
ಕಾಲು-ಸೊಂಟದ ನೋವಿನ ಕಥೆಗೆ ಕಿವುಡಳು
ಬಟ್ಟೆಗಳ ಒಪ್ಪವೇ ಉಪ್ಪು-ಗಂಜಿಗೆ ಮೂಲವು
ಕೈಯ ಲಯದೊಡನೆ ಮಣಿಸರವೂ ತೂಗುವುದು
ಸುಂದರಿ ಇವಳು

ಅತ್ತರು, ಸುರಮ, ಗೋರಂಟಿ ಮಾರುವ ಆತಿಕಾ
ಬಿಡಿಸುತ್ತಾಳೆ ಮೆಹೆಂದಿ, ಧರಿಸಿಯೇ ಬುರಕಾ
ಹತ್ತು ಖರ್ಜೂರ, ನೀರಲ್ಲೇ ದಿನವ ಕಳೆವಳು
ರಣ ಬದುಕಿಗೆ ಚಂದ್ರ ಮೂಗುತಿಯ ಹೊಳಪು
ಸುಂದರಿ ಇವಳು

ಜೊಮೆಟೋ ಆಹಾರ ವಿತರಣಾ ಸಿಬ್ಬಂದಿಯೀಕೆ
ಸದಾ ಜಾರಿ ಅವಸರ ಕರೆ, ಹುಡುಕಿ ಹಂಚಿಕೆ
ಬಿಡದ ಹೆಲ್ಮೆಟ್, ಮೊಬೈಲ್, ಸ್ಕೂಟಿ ಹೊಂದಾಣಿಕೆ
ಹೂಗಳ ಸ್ಕಾರ್ಫ್ ಮಾಜುವುದು ಕೊರಳ ನೇಣಿನ ಕಲೆ
ಸುಂದರಿ ಇವಳು

ಕಡು ಬೇಸಿಗೆಯಂತಹ ಬದುಕು ಹುರಿದರೂ
ಚೈತ್ರದ ಅಲರುಗಳಾಗಿ ಅಸ್ಮಿತೆಯ ಮೆರೆವರು
ದಿಟದಿ ಸುಂದರಿಯರಿವರು
ಶ್ರಮಿಕ ಸುಂದರಿಯರು ಇವರು
ಸುಂದರಿಯರು ಇವರು

೯. ಮಾಧುರಿ ಕೃಷ್ಣ

ನಾನು ,ನನ್ನ ಸಹಪಾಠಿ ಮಿತ್ರನೂ--
ಲೇಖನ ಮಾಲೆ-- 4
ಆಶಾವಾದ

ಕೊನೆಯ ತಮ್ಮನ ಮಗನ ಮದುವೆಗೆಂದು ಊರಿಗೆ ಹೋಗಿದ್ದ ನಾನು, ಹಿಂದಿನ ದಿನವೇ ಹೋಗಿ ಪಟ್ಟಾಗಿ ಎರಡು ಗಂಟೆ ಕುಳಿತು ನನ್ನ ಸಹಪಾಠಿ ಮಿತ್ರನೊಂದಿಗೆ ಮಾತಾಡಿ ಬಂದದ್ದು ಮನಸ್ಸಿಗೆ ತುಂಬ ಹಿತವಾಗಿತ್ತು. ಮರುದಿನ ಬೇಗನೇ ಎದ್ದು ನಿತ್ಯ ಕರ್ಮಗಳನ್ನೂ, ಅಲಂಕಾರಗಳನ್ನೂ ಎಂಟುಗಂಟೆಯೊಳಗೆ ಮುಗಿಸಿ ಕಾರಿನಲ್ಲಿ ಕುಳಿತು ಮದುವೆ ಛತ್ರಕ್ಕೆ ಹೋಗುತ್ತಿರುವಾಗಲೇ ಮಿತ್ರನ ಕರೆ ಬಂತು. "ನೀನು ಮದುವೆಗೆ ಹೋಗುತ್ತಿರುವುದನ್ನು ಹೇಳಿದ್ದರೂ ಅರ್ಜೆಂಟಾಗಿ ಮಾತಾಡಿ ಬಿಡೋಣ ಎಂದು ಕಾಲ್ ಮಾಡಿದೆ "ಎಂದವನು ನನ್ನ ಹುಬ್ಬು ಮೇಲೇರುವುದರೊಳಗೆ ಮುಂದುವರಿಸಿದ.."ನಮ್ಮ ಇಬ್ಬರು ಕ್ಲಾಸ್ ಮೇಟ್ಸ್- ಅದೇ ಫ್ರೀ ಲಾನ್ಸ್ ಮಾಡ್ತಾನಲ್ಲ ಅವನು ಮತ್ತು ಇನ್ನೊಬ್ಬ ಪ್ರಿನ್ಸಿಪಾಲ್ ಆಗಿ ರಿಟಾಯರ್ಡ್ ಆದವನು...ಇಬ್ಬರೂ ಇಂದು 5 ಗಂಟೆಗೆ ಮನೆಗೆ ಬರುತ್ತೇವೆ ಎಂದು ಹೇಳಿದ್ದಾರೆ... ನೀನೂ ಊರಿಗೆ ಬಂದಿರೋದ್ರಿಂದ ನಾವು ಒಮ್ಮೆ ಒಟ್ಟಿಗೆ ಮೀಟ್ ಆದಂತಾಗುತ್ತದೆ.... ಅದಕ್ಕೇ ನಿನಗೆ ಫೋನ್ ಮಾಡಿದೆ " ಎಂದು ಶಬ್ದಗಳನ್ನು ಕತ್ತರಿಸುತ್ತ ಹೇಳಿದ.

ಮರದ ಕುರ್ಚಿಯಲ್ಲಿ ಕುಳಿತೇ ಇಷ್ಟೊಂದು ಕಾರುಬಾರು ಮಾಡುವ ಮಿತ್ರನ ಗಂಡುಬುದ್ಧಿಗೆ ನಗು ಬಂದರೂ, ಆ ಮಾತುಗಳಲ್ಲಿನ ವಾಸ್ತವ ನನ್ನಲ್ಲೂ ಅನುರಣಿಸಿದಂತಾಗಿ ನಾನು ಉತ್ತರಿಸಿದೆ, "ಅಲ್ಲವೋ ಮಾರಾಯ, ಮದುವೆಗೆಂದು ಅವಸರದಲ್ಲಿ ಬಂದವಳು ನಾನು! 50 ವರ್ಷಗಳಲ್ಲಿ ಯಾವ ಬಾಯ್ಸ್ ನ್ನು ಮೀಟ್ ಆಗಿರದಿದ್ದರೂ, ಆಫ್ ಕೋರ್ಸ್ ಇತ್ತೀಚೆಗಷ್ಟೇ ನಿನ್ನನ್ನು ಬಿಟ್ಟು (ಇಲ್ಲಿ ಬೇಕೆಂದೇ ಕ್ಷಣ ತಡೆದು ಮುಂದುವರಿಸಿದೆ) ಬೇರಾರನ್ನೂ ಭೆಟ್ಟಿಯಾಗದೇ ಇದ್ದುದು ನಿಜವಾದರೂ, ಸ್ವಂತ ತಮ್ಮನ ಮಗನ ಮದುವೆ ಗಡಿಬಿಡಿ...ಅದಕ್ಕೆಂದೇ ನಿನ್ನೇನೇ ಬಂದು ನಿನ್ನ ಭೆಟ್ಟಿಯಾದುದು...

"ಒಂದರ್ಧ ಗಂಟೆ....ಪ್ಲೀಸ್...." ಅವನ ದನಿಯಲ್ಲಿನ ಅನುನಯ ನನ್ನನ್ನು ವಿಚಲಿಸಿತು.

" ಒಂದ್ನಿಮಿಷ " ಎಂದು ಮುಂದೆ ಬಾಗಿ ಮಗನಲ್ಲಿ ವಿಷಯ ಪ್ರಸ್ತಾಪಿಸಿ " ಆಗಬಹುದೇ? ಎಂದೆ.

"ಕರೆಕ್ಟಾಗಿ 5 ಗಂಟೆಗೇ ಎಂದಾದ್ರೆ ಮಾತ್ರ ಆಗಬಹುದೇನೋ! ಆದ್ರೆ ನೀವೆಲ್ಲಾ ಎಪ್ಪತ್ತರವರು! ಮಾತಾಡ್ತಾ ಕುಳಿತು ಬಿಟ್ಟರೆ ಎಲ್ಲಾ ಒಟ್ರಾಶಿ ಗಡಿಬಿಡಿಯೇ ಆಗುತ್ತದೆ... ಈಗಲೇ ಇನ್ನೊಮ್ಮೆ ಹೇಳಿ ಬಿಡುತ್ತೇನೆ ...ನಾಳೆ ಬೆಳಿಗ್ಗೆ ಅರ್ಲೀ ಮಾರ್ನಿಂಗ್ 3 ಗಂಟೆಗೇ ಹೊರಟು ಬಿಡಬೇಕು ನಾವು...ನಿಂಗೆ ಕಂಡೀಷನ್ ಹಾಕಿಯೇ ಹೊರಟದ್ದು ನಾನು.."
ಹೌದು! ಮಗನ ಖಡಾ ಖಂಡಿತಕ್ಕೆ ಒಪ್ಪಿಯೇ ಹೊರಟಿದ್ದು ನಾವು! ಅಷ್ಟಕ್ಕೂ ಎಷ್ಟು ಬುದ್ಧಿ ಖರ್ಚು ಮಾಡಿದ್ದೆ ನಾನು...ಹೆಚ್ಚಿನ ಬಂಧುಗಳೆಲ್ಲಾ ಅಲ್ಲೇ ಇರುವವರಲ್ಲದೆ ವಿದೇಶಗಳಿಂದ ಬರುವವರೂ ಬಂದಿರುವಾಗ..! ಈ ಅವಕಾಶವಕ್ಕೆ ನಾನೇ ಫ಼ೂಲ್ ಹಾರ್ಡಿಯಾದರೆ !!

"ಹಾಗಾದ್ರೆ, ಅವನಿಗೆ 'ಆಗೋಲ್ಲ!' ಎಂದು ಹೇಳಿ ಬಿಡುತ್ತೇನೆ" ಅರ್ಧ ಸ್ವಗತ, ಇನ್ನರ್ಧ ಮಗನ ಕಿವಿಗೂ ಬೀಳುವಂತೆ ಅಂದುಕೊಂಡೆ.

ಇದ್ದಕ್ಕಿದ್ದಂತೆ ಕಾರು ನಿಧಾನವಾಗಿದ್ದೂ ಅಲ್ಲದೆ ರಸ್ತೆ ಬದಿಗೆ ಹೋಗಿ ನಿಂತೇ ಬಿಟ್ಟಿತೇನೋ ಅನಿಸಿತು.

"ಅಮ್ಮ ನೀನೇ ಯೋಚಿಸು, ನಿನಗೆ ಬಂಧುಗಳು ಮುಖ್ಯವೋ, ಲಾಂಗ್ ಲಾಸ್ಟ್ ಮಿತ್ರರೋ..."

ಕಾರು ಛತ್ರದೆದುರು ಬಂದಿತ್ತು. ವಾದ್ಯಮೇಳ ಇಂಪಾದ ನಾಗಸ್ವರದೊಂದಿಗೆ ಬಣ್ಣ ಬಣ್ಣದ ಭೂಷಣಗಳಿಂದ ಕಣ್ಮನವನ್ನು ಸೆಳೆಯುತಿತ್ತು. ಛತ್ರವನ್ನು ಪ್ರವೇಶ ಮಾಡುತ್ತಿದ್ದ ತಮ್ಮ ಮತ್ತು ಇತರ ಬಂಧುಜನಗಳೊಂದಿಗೆ ನಾನೂ ಸೇರಿ ಹೋದೆ.

ಮತ್ತೆ ಧಾರೆ, ಲಗ್ನ ಎಂದೆಲ್ಲಾ ಮುಗಿಸಿ ಊಟಕ್ಕೆ ಕುಳಿತುಕೊಳ್ಳುವಾಗಲೇ ಮೂರುಗಂಟೆ ಆಗಿ ಹೋಗಿತ್ತು. ಈಗ ಎಲ್ಲರಿಗೂ ಸಂಜೆಯ ರಿಸ್ಸೆಪ್ಶನ್ನಿನ ಯೋಚನೆ. ಅಪರೂಪಕ್ಕೊಮ್ಮೆ ದೊರೆಯುವ ಈ ಅವಕಾಶದಲ್ಲಿ ನಮ್ಮ ನಮ್ಮ ವಸ್ತ್ರ ಆಭೂಷಣಗಳನ್ನು ಮೆರೆಸುವ ಭರಾಟೆ!

ಇಂಥಹ ಅವಕಾಶವನ್ನು ಬಿಡಬಲ್ಲೆನೇ ನಾನು ಎಂದು ಒಳಗೊಳಗೇ ರೋಮಾಂಚಿತಳಾಗುತ್ತ ಭರ್ಜರಿ ಒಡಲು ಸೆರಗಿನ ಝುಗಮಗಿಸುವ ಬೆನಾರಸ್ ಸಿಲ್ಕ್ ಉಟ್ಟೆ.

ಜತೆಯಲ್ಲೇ ನನ್ನ ಅತಿ ಫೇವರಿಟ್ ತೀಸ್ರೀ ಮಂಜಿಲ್ ಮಹಾರಾಷ್ಟ್ರ ಪೆಂಡೆಂಟ್ ನ್ನು ಬಾಕ್ಸಿನಿಂದ ಹೊರ ತೆಗೆದು ಹೆಮ್ಮೆಯಿಂದ ಧರಿಸಿ ,ತೂಗುವ ಕಿವಿಯೋಲೆ ಹಾಕಿಕೊಂಡೆ .ಅಲಂಕಾರವೆಲ್ಲ ತೃಪ್ತಿಕರವಾಗಿ ಮುಗಿದು ಕಾರಿನಲ್ಲಿ ಕುಳಿತಾಗ ನಾನು ನಾನಾಗಿರಲಿಲ್ಲ....

ಆಕಾಶದ ಏಳನೇ ಸ್ವರ್ಗದಲ್ಲೇ ತೇಲುತಿದ್ದೆ. ಕಾರು ಅಕಸ್ಮಾತ್ತಾಗಿ ನಿಂತ ಅರಿವಾದಾಗ ಅನಿವಾರ್ಯವಾಗಿ ಭೂಮಿಗೆ ಬಂದಿಳಿದ ನಾನು ಮಗನಲ್ಲಿ 'ಯಾಕೋ...ಏನಾಯ್ತು...!! ಎಂದು ಕೇಳುವುದಕ್ಕೂ ಮುಂಚೇನೇ ಅವನೇ ಬಾಯ್ಬಿಟ್ಟು
"ಅಮ್ಮ ಕ್ವಿಕ್ಕಾಗಿ, ಆ ಮೂವರಿಗೂ 'ಬಾಯ್ ' ಹೇಳಿ ಬಿಟ್ಟು ಬಾ "ಎಂದು ಹೇಳುತ್ತಿದ್ದವ ,ಹಠಾತ್ ಧ್ವನಿ ಬದಲಿಸಿ 'ಇದೇನಾಗ್ತಾ ಇದೆ ,ಇಲ್ಲಿ?'ಎಂದು ಕಿರಿಚಿಕೊಂಡ.

ಅವನ ಧ್ವನಿಗೆ ಬೆಚ್ಚಿ ಬಿದ್ದು ನಾನೂ ಕಾರಿನ ಬಾಗಿಲು ತೆರೆದು ಹೊರ ನೋಡಿದೆ.

ನನ್ನ ಮಿತ್ರನ ಮನೆ ಮುಂದೆ ಎಂಟ್ಹತ್ತು ಜನ ಸೇರಿದ್ದರು. ಆಂಬ್ಯುಲೆನ್ಸ್ ಬಾಗಿಲು ತೆರೆದಿತ್ತು..ಸಿಬ್ಬಂದಿಗಳು ಅವಸರದಿಂದ ಸ್ಟ್ರೆಚರ್ ತಂದು ಒಳಗಿಡುತಿದ್ದರು. ಮಿತ್ರನ ಎರಡೂ ಹೆಣ್ಣು ಮಕ್ಕಳು ಕಾರನ್ನೇರಲು ಹೊರಟಿದ್ದರು...'ಹೇ..'ಎನ್ನುತ್ತ ನಾನು ಸೀರೆಯ ಸೆರಗನ್ನೆಳೆದು ಹೊದೆಯುತ್ತ ಅಲ್ಲಿಗೆ ಓಡಿದೆ. ಆಂಬ್ಯುಲೆನ್ಸಿನ ತೆರೆದ ಬಾಗಿಲಿಗೆ ಹೋಗಿ ನಿಂತೆ. "....ಶುಗರ್ ಡೌನ್ ಆಗತೊಡಗಿತು....ಆಸ್ಪತ್ರೆಗೆ..."ಎಂದು ಕಷ್ಟಪಟ್ಟು ಮಿತ್ರನುಲಿದ. ಬಾಗಿಲು ಮುಚ್ಚಿತು..ಆಂಬ್ಯುಲೆನ್ಸ್ ಭರ್ರೆಂದು ಸಾಗಿತು. ಮಿತ್ರನ ಹೆಣ್ಣು ಮಕ್ಕಳು ಕುಳಿತ ಕಾರು ಶರವೇಗದಿಂದ ಹಿಂಬಾಲಿಸಿತು.

ಹೊದೆದ ಸೆರಗನ್ನು ಗಟ್ಟಿಯಾಗಿ ಹಿಡಿದುಕೊಂಡು ನಾನು ಹಾಗೇ ನಿಂತಿದ್ದೆ. ಮಿತ್ರನ ಚುರುಕು ಮೊಮ್ಮಗ ಎದುರಿಗೆ ಬಂದ...." ಡೋಂಟ್ ವರೀ ಆಂಟೀ, ನಾಳೆಯಲ್ಲ ನಾಡಿದ್ದಲ್ಲ...ಅದರ ಆಚೆಯ ನಾಡಿದ್ದು ನೀವು ಬನ್ನಿ. ಅಷ್ಟರಲ್ಲಿ ಅಜ್ಜ ಹುಶಾರಾಗಿ ಮನೆಗೆ ಬಂದು ಬಿಡುತ್ತಾರೆ."

ನಾನು ಅವನ ಮುಖವನ್ನೇ ನೋಡಿದೆ....ಆ ಸುಂದರ ವದನದಲ್ಲಿ ಕಪ್ಪು ಕಣ್ಣುಗಳು ಫಳಫಳನೆ ಹೊಳೆಯುತಿದ್ದುವು. ಅಲ್ಲಿ ಭರವಸೆಯಿತ್ತು....ಆಶಾವಾದದ ಗಟ್ಟಿ ಎಳೆಯೂ ಇತ್ತು!! ಆ ಎಳೆಯನ್ನು ಕೈ ಚಾಚಿ ನಾನೂ ಹಿಡಿದುಕೊಳ್ಳುತ್ತ, ಮೈ ಮೇಲಿನ ಸೆರಗನ್ನು ಇನ್ನೂ ಗಟ್ಟಿಯಾಗಿ ಹೊದೆದುಕೊಳ್ಳುತ್ತ....ಕುಸಿದು ಹೋಗಲೆತ್ನಿಸುತಿದ್ದ ಕಾಲುಗಳನ್ನು ಕುಂಟುತ್ತಲೇ ಎಳೆದೊಯ್ದು , ಕಾರಿಗೊರಗಿ ಕೈ ಕಟ್ಟಿ ನಿಂತಿದ್ದ ಮಗನ ಬಳಿ ಬಂದೆ .

೧೦. ಭ ರಾ ವಿಜಯಕುಮಾರ



ಕವಿರೇವ...

ಅಂಡಾಂಡವೂ ನಾನೆ, ಪಿಂಡಾಂಡವೂ ಕೂಡ
ಲೋಕಾನುಭವಕೆಲ್ಲ ನಾ ಕಾರಣ !
ಚಂಡ ಪ್ರಚಂಡರೆಲ್ಲರು ಕೈಯ ಬೊಂಬೆಗಳು
ನನ್ನಿಂದಲೇ ಜನನ, ಕೊಡುವೆ ಮರಣ !

ರಾಮ ಗಮನವು ನಾನೆ ಕೃಷ್ಣ ಗೀತೆಯು ನಾನೆ
ಬುದ್ಧ ಕರುಣೆಗೆ ಹಿನ್ನೆಲೆಯು ನಾನೆ
ಗ್ರಹ ತಾರೆ ಗತಿ ಕೂಟ ಭ್ರಮಣದಕ್ಷವು ನಾನೆ
ಅಷ್ಟದಿಕ್ಪಾಲಕರ ಕೇಂದ್ರ ನಾನೆ ||

ಚಂಡಮಾರುತ ನಾನೆ, ಭಂಡ ಶಾಸನವೆನದೆ
ಹೊನ್ನು ಹೆಣ್ಣು ಮಣ್ಣಿನಾಸೆ ನಾನೆ
ಕಷ್ಟಕೋಟಲೆ ಕೊಡುವೆ, ತಂಗಾಳಿಯನು ತರುವೆ
ಕಡಲ ದಾಟಲು ಕೊಡುವೆನೆನ್ನ ನಾವೆ ||

ವಾಲ್ಮೀಕಿಯೊಡನಿದ್ದು ವ್ಯಾಸರಿಗೆ ಕಥೆ ಹೇಳಿ
ಕಾಳಿದಾಸಗೆ ಕಾವ್ಯ ಕಲಿಸಿದವನು
ಕಾಲಕಾಲಕೆ ಪಾತ್ರ ಸೂತ್ರಗಳನಾಡಿಸುತ
ಸೃಷ್ಟಿ ಸ್ಥಿತಿ ಲಯಗಳಲಿ ಮುಳುಗಿರುವೆನು ||

ನನ್ನ ರಚನೆಗೆ ನಾನೆ ಬಲು ಮೋಹಗೊಳ್ಳುವೆನು
ಚಿತ್ರಕಥೆಯನು ನಾನೆ ಬರೆದುಕೊಂಡು
ನಾನೆ ಮೆಚ್ಚಿದ ಪಾತ್ರಗಳೆನ್ನ ಸುತ್ತುತಲಿರಲು
ಅಚ್ಚರಿಯು ನನಗೆ ನಾ ಬೆರಗುಗೊಂಡು ! ||

ಪ್ರಜಾಪತಿ

೧೧. ಅನ್ನಪೂರ್ಣ ಸುಬ್ಬರಾವ್

ಗುಬ್ಬಿ ಗೂಡು

ನಮ್ಮೂರು ಪುಟ್ಟ ಹಳ್ಳಿ, ಸಾಮಾನ್ಯವಾಗಿ ಎಲ್ಲರ ಮನೆ ಮುಂದೂ ವಪ್ಪಾರ ಹಾಕಿರ್ತಾರೆ. ಬಿಸಿಲಲ್ಲಿ ಬಂದವರು ಒಪ್ಪಾರದ ಕೆಳಗೆ ಕೂತ್ರೆ ತಣ್ಣಗಿರುತ್ತೆ..ನಮ್ಮ ಮನೆಯ ಮುಂದೂ ವಪ್ಪಾರ (ಚಪ್ಪರ) ಹಾಕಿತ್ತು.. ನಾನಿನ್ನೂ ಚಿಕ್ಕವನು. . ಹಳ್ಳಿ ಅಂದ್ರೆ ಕೇಳ್ಬೇಕಾ..! "ಗೂಟ್ಟುಟ್ಕಥೆ ದೀಪ್ಮ ನೋಟ್ಲಾ ಕಡಿ" "(ಗೂಡಲ್ಲಿ ದೀಪ, ಬಾಯಲ್ಲಿ ತುತ್ತು)"ಅನ್ನೋ ಹಾಗೆ ಏಳ್ ಗಂಟೆಗೆಲ್ಲ ಊಟ ಮುಗಿದು ಹೋಗ್ತಿತ್ತು . ಊಟಮಾಡಿದ್ದೇ ತಡ, ಹೊರಗೆ ವಪ್ಪಾರದ ಕೆಳಗೆ ಈಚಲ ಚಾಪೆ ಉದ್ದಕ್ಕೂ ಹಾಕಿ ಅದರ ಮೇಲೊಂದು ಸೀರೆ ಹಾಸ್ಕೊಂಡು, ಅಕ್ಕ ಪಕ್ಕದ ಮನೆಯ ಒಂದೆರಡು ಮಕ್ಳು ಸೇರ್ಕೊಂಡು ಕಥೆ ಹೇಳ್ತಾ, ಕಥೆ ಕೇಳ್ತಾ, ಮಲಗ್ತಾ ಇದ್ದದ್ದು ಅದೇನೋ ಆನಂದ.. ತಣ್ಣಗೆ ಬೀಸೋ ಗಾಳಿ. ಆಕಾಶ ನೋಡ್ತಾ ಚುಕ್ಕಿಗಳನ್ನು ಎಣಿಸ್ತಾ, ಯಾವಾಗ ನಿದ್ದೆಗೆ ಜಾರ್ತಿದ್ವೋ ನಮಗೇ ಗೊತ್ತಾಗ್ತಾ ಇರ್ಲಿಲ್ಲ.. ಏಳೋದು ಮತ್ತೆ ಬೆಳಗಾದ ಮೇಲೆ , ಸೂರ್ಯ ನೆತ್ತಿಮೇಲ್ ಬಂದಿದಾನೆ ಇನ್ನೂ ಬಿದ್ದಿದ್ದೀರಾ..!! ಅಂಗಳದಲ್ಲಿ ಎದ್ದೇಳ್ರೋ ಮೇಲೆ , ಅಂತ ಬೈದಾಗ್ಲೆ ನಮಗೆಲ್ಲ ಎಚ್ಚರ..!!

ಏಳ್ತಿದ್ದ ಹಾಗೇ ಗುಂಪು ಗುಂಪಾಗಿ ಗುಬ್ಬಚ್ಚಿಗಳು ಅಂಗಳದಲ್ಲೆಲ್ಲ ಚಿವ್ ಚಿವ್ ಅಂತ ಹಾರಾಡ್ತಾ ಹೆಕ್ಕಿ ಹೆಕ್ಕಿ ತಿಂತಾ ಇದ್ದದ್ದು ನೋಡಿದ್ರೆ ನಂಗೆ ಏನೋ ಖುಷಿ. ಏನ್ ತಿನ್ನುತ್ವೆ ಇವು ..? ಅನ್ನೋ ಕುತೂಹಲ..!! ನಮ್ಮನೆ ವಪ್ಪಾರದಲ್ಲಿ ಗುಬ್ಬಿ ಗೂಡು ಕಟ್ಟಿತ್ತು.. ಅದು ಎಷ್ಟು ಚೆನ್ನಾಗಿ ಕಟ್ಟಿತ್ತು ಅಂದ್ರೆ ,..!ಆಚೆಯಿಂದ ನೋಡಿದ್ರೆ ಅಲ್ಲಿ ಗೂಡು ಇದೆ ಅನ್ನೋದೇ ಗೊತ್ತಾಗ್ತಾ ಇರ್ಲಿಲ್ಲ.! ಅವು ಒಂದಾದ್ಮೇಲ್ ಒಂದು ಅಲ್ಲಿಗೆ ಹಾರಿ ಹೋಗಿ, ಬಂದು ಹಾರಾಡ್ತಾ ಇದ್ದಾಗ್ಲೇ ನಂಗೂ ಅಲ್ಲಿ ಗೂಡಿದೆ ಅಂತ ಗೊತ್ತಾಗಿದ್ದು.

ನಂಗೆ ಕುತೂಹಲ. ಅದ್ರಲ್ಲಿ ಮೊಟ್ಟೆ ಇದ್ಯಾ ಅಂತ.! ಹೇಗೆ ನೋಡೋದು..!! ಜೊತೆ ಹುಡುಗರನ್ನ ಕರ್ಕೊಂಡೆ. ಒಬ್ಬನನ್ನು ಕೆಳಗೆ ಕೂಡ್ಸಿ , ಅವನ ಭುಜದ ಮೇಲೆ ಹತ್ತಿ, ಒಪ್ಪಾರಕ್ಕೆ ಕಟ್ಟಿದ್ದ ಬೊಂಬನ್ನು ಹಿಡ್ಕೊಂಡು ಕಷ್ಟಪಟ್ಟು ಇಣುಕಿ ನೋಡ್ದೆ... ಮೂರು ಮೊಟ್ಟೆ ಇತ್ತು. ಏಯ್ ಮೂರು ಮೊಟ್ಟೆ ಇವ್ಯೇ ಅಂದೆ..ಏಯ್ ನಾನ್ ನೋಡ್ತೀನೋ ಈಗ, ಅಂತ ಇನ್ನೊಬ್ಬ, ಹಾಗೇ ಎಲ್ಲರೂ ಅದೇ ಉಪಾಯ ಮಾಡಿ ನೋಡಿದ್ದಾಯ್ತು. ಬ್ಯಾಗ್ ನೇತಾಕ್ಕೊಂಡು ಸ್ಕೂಲಿಗೆ ಹೋದಾಗ ಮಾತ್ರ ಅದಕ್ಕೆ ಬಿಡುವು.. ಬಂದಕೂಡ್ಲೇ ಮತ್ತದೇ ಕೆಲ್ಸ ನಂಗೆ. ಯಾವಾಗ ಮರಿ ಆಗುತ್ತೆ ಅಂತ ನೋಡ್ತಾ ಇದ್ದೆ. ಅದ್ಯಾವಾಗ ಮೊಟ್ಟೆಒಡೆದು ಆಚೆ ಬಂದ್ವೋ, ಮರಿಗಳಾಗಿದ್ವು. ಲೇ ಮರಿ ಆಗಿವೆ ಬನ್ರೋ ಅಂದೆ. ಎಲ್ರೂ ಓಡಿಬಂದ್ರು . ಮತ್ತದೇ ಸರ್ಕಸ್. ಮಾಡ್ಕೊಂಡು ಎಲ್ರೂ ನೋಡಿದ್ದಾಯ್ತು. ನಾವು ಗೂಡಿನತ್ರ ಹೋದ್ರೆ ಸಾಕು,ಮರಿಗಳು ಬಾಯಿ ತೆಕ್ಕೊಂಡು, ತಲೆ ಮೇಲಕ್ಕೆತ್ಕೊಂಡು ಕಿಚಿಕಿಚಿ ಅಂತ ನೋಡ್ತಾ ಇದ್ವು. ಅವು ಅಮ್ಮನ ಬಾಯಲ್ಲಿದ್ದ ಹುಳನ್

ತಿನ್ನದುನ್ನ ನೋಡಕ್ಕೆ ನಂಗೆ ಇಷ್ಟ.. ಮೆಟ್ಟಿಲ ಮೇಲೆ ಕಾಯ್ಕೊಂಡು ಕೂತಿರ್ತಾ ಇದ್ದೆ.. ನಾನು ಗೂಡತ್ರ ಹೋದ್ರೆ ಸಾಕು ಅಮ್ಮ ಬೈಯ್ಯೋದು.. ನಿಂಗೆ ಆಸೆ ಅಂತ ಪದೇಪದೇ ಹೋಗಿ ನೋಡ್ತಾ ಇದ್ರೆ ಅವಕ್ಕೂ ಹಿಂಸೆ ಆಗಲ್ವ. ಅದನ್ನು ಒಂದ್ಸಲ ಮುಟ್ಟಿದ್ರೆ ಅದರಮ್ಮ ಹತ್ರ ಹೋಗಲ್ಲ. ಜೊತೆ ಸೇರ್ಸಲ್ಲ.. ಅದನ್ನು ಕುಕ್ಕಿ ಸಾಯ್ಸುತ್ತೆ.. ಆ ಪಾಪ ಮಾತ್ರ ಮಾಡ್ಬೇಡ. ಅದರ ಪಾಡಿಗೆ ಅದನ್ನು ಬಿಟ್ಟು ಬಾ ಈಕಡೆ, ಅಂತ ಜೋರು ಮಾಡ್ತಿದ್ಲು.. ಆದ್ರೂ ನಾನು ಅದೇ ಕೆಲ್ಸ ಮಾಡ್ತಾ ಇದ್ದೆ...

ಒಂದು ವಾರ ಕಳೆದಿತ್ತು. ಮರಿ ಸ್ವಲ್ಪ ದೊಡ್ಡದಾಗಿದ್ವು. ಆ ಸಂತೋಷ ಹೇಳೋಣ ಅಂದ್ರೆ ಗೆಳೆಯರು ಊರಿಗೆ ಹೋಗಿದ್ರು.. ನಾನೊಬ್ನೆ.ದಿನಕ್ಕೆರಡು ಸಲ ನೋಡ್ತಿದ್ದೆ. ಒಂದಿನ ಒಂದೆಸಮ ಚೀವ್ ಚೀವ್ ಶಬ್ದ ಕೇಳಿ , ಆಚೆ ಬಂದೆ. ನೋಡಿದ್ರೆ ಮರಿ ಕೆಳಗೆ ಬಿದ್ದಿದೆ.. ಅಮ್ಮಂಗೆ ಕೂಗಿ ಹೇಳ್ದೆ.ಅಮ್ಮಬಂದು ನೋಡಿದ್ಲು.ಪುಣ್ಯಕ್ಕೆ ಬೆಕ್ಕು ನಾಯಿ ಕಣ್ಣಿಗೆ ಬಿದ್ದಿಲ್ಲ.. ನೀನೂ ಅದನ್ನು ಮುಟ್ಬೇಡ. ನಾಯಿ ಬೆಕ್ಕು ಬರದ ಹಾಗೆ ದೂರ ನಿಂತು ನೊಡ್ತಾಯಿರು.. ಅದರಮ್ಮ ಬಂದು ತಗೊಂಡ್ ಹೋಗುತ್ತೆ ಅಂದ್ಲು. ಎಷ್ಟು ಹೊತ್ತು ನೋಡಿದ್ರು ಅದರಮ್ಮ ಬರ್ಲೆಇಲ್ಲ. ಪಾಪ ಅಂತ ನಾನೆ ಅದನ್ನು ಎತ್ತಿ ಕೈಯ್ಯಲ್ಲಿ ಹಿಡ್ಕೊಂಡೆ.. ಅಷ್ಟೊತ್ತಿಗೆ ಅದೆಲ್ಲಿತ್ತೋ ಅದರಮ್ಮ ಹಾರಿ ಬಂತು.. ಗಾಬರಿಯಿಂದ ನಾನು ಆ ಮರಿಯನ್ನು ಅಲ್ಲೇ ಕೆಳಗಿಟ್ಟು ದೂರ ಬಂದೆ. ಆದ್ರೆ ಅದರಮ್ಮ ಅದನ್ನು ನೋಡ್ಲೇ ಇಲ್ಲ ..!! ತಗೊಂಡು ಹೋಗ್ಲಿಲ್ಲ.. ನೀನು ಮುಟ್ಟಿದ್ಯಾ ಅದನ್ನ ಕೇಳಿದ್ಲು ಅಮ್ಮ.. ನಾನು ತಪ್ಪಿತಸ್ಥನಂತೆ ತಲೆ ಕೆಳಗೆ ಹಾಕ್ದೆ..

ಕೊನೆಗೂ ಬೇಡ ಅಂದಿದ್ದನ್ನೆ ಮಾಡ್ದೆ.. ನೋಡು. ಈಗ ಆ ಮರಿನ ಸೇರ್ಸಲ್ಲ ಅದು. ಅಮ್ಮ ಇಲ್ದೆ ಸತ್ತೋಗುತ್ತೆ. ಅಂದ್ಲು.. ನನ್ನ ಬಗ್ಗೆ ನಂಗೇ ಬೇಸರ ಆಯ್ತು ಅಮ್ಮ ಹೇಳ್ದ ಹಾಗೆ ಮಾರನೇ ದಿನ ಮರಿ ಸತ್ತು ಹೋಗಿತ್ತು. ಇರುವೆಗಳಿಗೆ ಆಹಾರ ಆಯ್ತು..

ಇನ್ನೆರಡು ದಿನ ಬಿಟ್ಟು ನೋಡಿದೆ ಗೂಡಲ್ಲಿ ಎರಡು ಮರಿಗಳೂ ಇಲ್ಲ. ಅದ್ಯಾವ ಮಾಯದಲ್ಲಿ ಹಾರಿಹೋದವೋ ಗೊತ್ತೇ ಆಗ್ಲಿಲ್ಲ. ಖಾಲೀ ಗೂಡು. ಏನೋ ಕಳೆದುಕೊಂಡ ಭಾವ..ಮತ್ತೆರಡು ದಿನದಲ್ಲಿ ಮತ್ತೊಂದು ಗೂಡು.. ಆದರಲ್ಲಿ ನಾಲ್ಕು ಮೊಟ್ಟೆ. ಈ ಸಲ ನಾನು ಅವುಗಳ ತಂಟೆಗೆ ಹೋಗ್ಲಿಲ್ಲ.
ನಮ್ಮ ವಪ್ಪಾರದಲ್ಲಿ ಅದೆಷ್ಟು ಗುಬ್ಬಿಗಳು ಗೂಡು ಕಟ್ಟಿದ್ದವೋ, ಎಷ್ಟು ಮರಿಗಳು ಹಾರಿಹೋದವೋ, ..!! ಲೆಕ್ಕವಿಲ್ಲ.. ನನ್ನಂಥವನ ಕುತೂಹಲಕ್ಕೆ ಅದೆಷ್ಟು ಮರಿಗಳು ಪ್ರಾಣ ಬಿಟ್ಟು, ಇರುವೆಗೆ ಆಹಾರ ವಾಗಿವೆಯೋ...? ಪಾಪದ ಗುಬ್ಬಿಗಳು.. ಗುಬ್ಬಿಯ ಪ್ರಾಣ ತೆಗೆದ ಪಾಪ ಪ್ರಜ್ಞೆ ಮಾತ್ರ,ಈ ಕ್ಷಣಕ್ಕೂ ನನ್ನನ್ನು ಕಾಡ್ತಾನೆ ಇದೆ..!! ನನ್ನ ಕುತೂಹಲಮಾತ್ರ ಅಂದಿಗೆ ಕೊನೆಯಾಯ್ತು..

ಮತ್ತೆಂದೂ ಗುಬ್ಬಿ ಗೂಡನ್ನು ನಾನು ಕಾಣಲೇ ಇಲ್ಲ .. ಈಗ ಗುಬ್ಬಿನೇ ಇಲ್ಲ, ಇನ್ನು ಗೂಡೆಲ್ಲಿಂದ ಬರ್ಬೇಕು..? ಅಂತೀರಾ..!! ಅದೂ ನಿಜ ಅಲ್ವಾ...!!

೧೨. ಶೀಲಾ ಅರಕಲಗೂಡು

ಹೀಗಾಗು ಮಗುವೆ
(ಮೌಲ್ಯ ಕಾವ್ಯ)

ನರನಾಗಿ ಹುಟ್ಟುವುದು ವರವೆಂದು ಹೇಳುವರು |
ಮಾನವತೆ ಮೆರೆಯುತ್ತ ಬಾಳಬೇಕಂತೆ ||
ಬದುಕಿನಾ ಮೌಲ್ಯಗಳ ನಿಧಿಯುಂಟು ಸೃಷ್ಟಿಯಲಿ |
ನೋಡುತ್ತ ಕಲಿಯುತ್ತ ಅಂತೆ ಬೆಳೆ ಮಗುವೆ ||೧||

ಹುದುಗಿಟ್ಟ ಬೀಜವದು ಮೊಳಕೆಯೊಡೆಯುವುದಂತೆ |
ಬುವಿಯ ಸತ್ತ್ವವ ಹೀರಿ ಹೊರ ಬರುವುದಂತೆ ||
ಬಂದಿಹೆವು ಈ ಜಗಕೆ ಅಂತೆಯೇ ನಾವೆಲ್ಲ |
ನೀ ಕೂಡ ಬಿರಿಯುತಿರು ಜಗದಲ್ಲಿ ಮಗುವೆ ||೨||

ಮೊಳಕೆ ಭೂಮಿಯ ಹೊರಗೆ ತಾ ಬಂದು ಚಿಗುರುವುದು |
ಸುತ್ತಲೂ ನೋಡುವುದು ಕೌತುಕದಿ ನಲವಿಂ ||
ಬೇರೂರಿ ನೆಲದೊಳಗೆ ದೃಢವಾಗಿ ನಿಲ್ಲುವುದು |
ಜಗವೆಲ್ಲ ಸೊಗಸೆಂದು ತೋರುವುದೆ ಮಗುವೆ ||೩||

ಹಸಿರಾದ ನವಿರಾದ ಹೊಳಪಾದ ಎಳೆ ಚಿಗುರು |
ಮುದ್ದಿಕ್ಕುವಂತಿಹುದು ಸೃಷ್ಟಿಯದ್ಭುತವು ||
ಚಿಗುರಂತೆ ಹೊಳೆಯುತಿಹೆ ಜಗವನ್ನು ಸೆಳೆಯುತಿಹೆ |
ಹೆಮ್ಮೆ ನೀ ನಮಗೆಲ್ಲ ಓ ಮುದ್ದು ಮಗುವೆ ||೪||

ಚಿಗುರುಗಳು ಬಲು ಚುರುಕು ಬೆಳೆಯುವುವು ಬಲು ಬೇಗ |
ಸೊಗಸಾಗಿ ವಿಸ್ತರಿಸಿ ಕೊಂಬೆಯೊಡಗೂಡಿ ||
ಮೃದುವಾಗಿ ಅವುಗಳನು ಹಿಡಿದಿರುವ ಕೊಂಬೆಗಳು |
ತಾಯ್ತಂದೆಯಂತಿಹುವು ಅಲ್ಲವೇ ಮಗುವೆ ||೫||

ನೋಡ ನೋಡುತ ಸಸಿಯು ಬೆಳೆಯುತ್ತ ಗಿಡವಾಗಿ |
ಮಾರುದ್ದ ಕಾಣುವುದು ಚಕಿತಗೊಳಿಸುವುದು ||
ಶಕ್ತಿಯನು ಹೀರುತ್ತ ಬಲವಾಗಿ ಬೆಳೆಯುತ್ತ |
ಕಣ್ತುಂಬುವಂತೆ ಬೆಳೆ ನೀ ಕೂಡ ಮಗುವೆ ||೬||

ಹಿರಿದಾದ ಮರ ನೋಡು ಮುಗಿಲೆಡೆಗೆ ಮುಖವಿಹುದು |
ಕಾಣದಿಹ ಬೇರು ಸಹ ಭೂಮಿಯಾಳದಲಿ ||
ಕಾಲ ಕಳೆದಂತೆಲ್ಲ ಹೆಮ್ಮರವು ನೀನಾಗು |
ಸಂಸ್ಕೃತಿಯ ಬೇರುಗಳ ಮರೆಯದಿರು ಮಗುವೆ ||೭||

ಗಿಡ ಮರದ ತುಂಬೆಲ್ಲ ಹೂ ಕಾಯಿ ಹಣ್ಣುಗಳು |
ಹಲವಾರು ಬಣ್ಣಗಳು ಹಲಬಗೆಯ ರೂಪ ||
ತಾನೊಂದ ಬಳಸದೆಯೆ ಜಗಕಾಗಿ ನೀಡುವುವು |
ದಾನಿಯಾಗುತ ಹೀಗೆ ಬೆಳೆ ನೀನು ಮಗುವೆ ||೮||

ಮೇಲೊಬ್ಬ ಕುಳಿತಿಹನು ಮೇಧಾವಿ ಕಲೆಗಾರ |
ಚಿತ್ರಿಸಿಹ ಸೃಷ್ಟಿಯನು ಬಹು ವರ್ಣದಲ್ಲಿ ||
ನರ್ತಿಸುವ ನವಿಲೇನು ತಲೆದೂಗೊ ಗರಿಯೇನು |
ನೋಡುತ್ತಲವುಗಳನು ಕಲೆಯ ಕಲಿ ಮಗುವೆ ||೯||

ಸಾಗರದ ನೀರ ಹನಿ ಬೇಗೆಯಲಿ ಹಬೆಯಾಗಿ |
ಮೇಲೇರಿದಂತೆಲ್ಲ ತಂಪು ತಂಪಾಗಿ ||
ಒಗ್ಗೂಡಿ ಘನವಾಗಿ ಬುವಿಗೆ ತಾ ಸುರಿವಂತೆ |
ಕೆರೆಯ ನೀರನು ಕೆರೆಗೆ ಚೆಲ್ಲು ನೀ ಮಗುವೆ ||೧೦||

ಕೆಳಬಿದ್ದ ನೀರಹನಿ ಹರಿಯುವುದು ಎಲ್ಲೆಲ್ಲೊ |
ಕೆರೆಯಲ್ಲಿ ನದಿಯಲ್ಲಿ ಕಲ್ಲು ಕೊರಕಲಲಿ ||
ಸೋಲದೆಯೆ ಕುಗ್ಗದೆಯೆ ಸಾಗಿ ಸಾಗರ ಸೇರಿ |
ಧನ್ಯತೆಯ ಪಡೆವಂತೆ ನೀ ಬಾಳು ಮಗುವೆ ||೧೧||

ಮಾರುತವು ಸಾಗುವುದು ಯಾವೆಡೆಯು ನಿಲ್ಲದೆಯೆ |
ಉಸಿರ ಕೊಡುತೆಲ್ಲರಿಗೆ ಭೇದ ತೋರದೆಯೆ ||
ಗರ್ವವೆನಿತೂ ಇಲ್ಲ ಭಾರವೆನಿಸುವುದಿಲ್ಲ |
ನಿರ್ಮಲದ ಮನಸಿನಲಿ ಒಡನಾಡು ಮಗುವೆ ||೧೨||

ಕಲ್ಲೆರಡ ತಿಕ್ಕಿದರೆ ಬೆಂಕಿ ಕಿಡಿ ಹತ್ತುವುದು |
ಕಿಡಿಯುರಿಯೆ ಬೆಳಗಿ ಜ್ವಾಲೆ ತಾನಾಗುವುದು ||
ಜಡವೆಂಬ ಶಿಲೆಯೊಳಗು ಜ್ಯೋತಿಯಡಗಿರುವಂತೆ |
ನಿನ್ನೊಳಿಹ ಬೆಳಕನ್ನು ಹಂಚುತಿರು ಮಗುವೆ ||೧೩||

ಗಗನದಲಿ ನಕ್ಷತ್ರ ಗಣನೆಗೆಟುಕದ ಸಂಖ್ಯೆ |
ಒಂದೊಂದು ಬಹು ದೊಡ್ಡ ಸೌರ ವ್ಯೂಹದೊಲು ||
ಆದರೂ ತಿಕ್ಕಾಟ ಘರ್ಷಣೆಗಳಲ್ಲಿಲ್ಲ |
ಅಂತೆ ನೀ ಬಾಳುತಿರು ಸರ್ವರೊಳು ಮಗುವೆ ||೧೪||

ಮೇಲೇರಿದಂತೆಲ್ಲ ಗಾತ್ರ ಕಿರಿದೆನಿಸುವುದು |
ಬಳಿ ಸಾರಿ ನೋಡಿದರೆ ವ್ಯಕ್ತಿತ್ವ ಹಿರಿದು ||
ಅಂತ್ಯವಿಲ್ಲದ ವಿಶ್ವ ನಾವಿಲ್ಲ ಕಣಗಾತ್ರ |
ಇದನರಿತು ವಿನಯದಲಿ ನಡೆಯುತಿರು ಮಗುವೆ ||೧೫||

ವಿಜ್ಞಾನ ಸುಜ್ಞಾನ ಅಡಗಿಹುವು ಸೃಷ್ಟಿಯಲಿ |
ವಿಶ್ವದದ್ಭುತವೆಲ್ಲ ವಿಧಿ ನಿಯಮದಂತೆ ||
ಎಲ್ಲ ಬಗೆ ಶಾಸ್ತ್ರಗಳು ಹುಡುಕುತ್ತಲವುಗಳನು |
ಬೆಳೆದಿಹವು ಈ ತನಕ ತಿಳಿ ನೀನು ಮಗುವೆ ||೧೬||

ಸೃಷ್ಟಿ ಕಲಿಸುವ ಪಾಠ ಬಾಳಿ ತೋರುನ ನೀತಿ |
ಮಿಗಿಲುಂಟೆ ಇದಕಿಂತ ಬೇರೊಬ್ಬ ಗುರುವು ||
ತಿಳಿದಂತೆ ಅರಿತಂತೆ ಕರಗುವುದು ಅಜ್ಞಾನ |
ಇದನರಿತು ನೀನಾಗು ಸುಜ್ಞಾನಿ ಮಗುವೆ ||೧೭||

ಮೌಲ್ಯಗಳು ಬದುಕಿನಲಿ ತಳಪಾಯವಿದ್ದಂತೆ |
ಸೃಷ್ಟಿಯಲಿ ಹುದುಗಿಹವು ಎಲ್ಲ ಮೌಲ್ಯಗಳು ||
ಪ್ರಕೃತಿ ಸಾಂಗತ್ಯದಲಿ ಹುಡುಕುತ್ತಲವುಗಳನು |
ಅಳವಡಿಸಿ ನೀ ಬಾಳು ಅನವರತ ಮಗುವೆ ||೧೮||

೧೩. ಕಮಲಾಕ್ಷಿ ಸಿ ಆರ್.

ಮೌನಕಿಂತ_ತಪವಿಲ್ಲ

ಮಾತುಗಳಲಿ ನಾ ಮುಳುಗಿ
ಅನರ್ಥ ಸೃಜಿಸುವ ಮುನ್ನ
ಮೌನವೇ ನನ್ನ ಎಚ್ಚರಿಸೆಯಾ?
ಸಹನೆಯೊಡೆದು ಮಾತು
ಹೊರಬರುವ ಮುನ್ನ
ಮೌನವೇ ನನ್ನ ಆವರಿಸೆಯಾ?
ಮಾತಿಗೆ ಮಾತು ಹೊಸೆದು
ಸ್ನೇಹ ಕದಡುವ ಮುನ್ನ
ಮೌನವೇ ನನ್ನ ಬಂಧಿಸೆಯಾ?
ಕುಹಕದ ಉಕ್ತಿಗೆ ಕಿವಿಯಾಗಿ
ನಾಲಿಗೆ ಉಲಿವ ಮುನ್ನ
ಮೌನವೇ ಚಿಂತನೆಗೆ ನೂಕೆಯಾ?
ಚುಚ್ಚು ಮಾತುಗಳಿಗೆ ಬೆಚ್ಚುತ
ಕುಗ್ಗಿ ಕನವರಿಸುವ ಮುನ್ನ
ಮೌನವೇ ತಪವಾಗಿ ಮಥಿಸೆಯಾ?
ಮೆಚ್ಚು ಮಾತುಗಳಿಗೆ ಸೋತು
ಸೊಕ್ಕಿ ನುಡಿಯುವ ಮುನ್ನ
ಮೌನವೇ ಸಹನೆಯ ತೋರೆಯಾ?
ನಾನು ನೀನೆಂಬ ಭಾವದಿ
ಮೆರೆದು ನಡೆವ ಮುನ್ನ
ಮೌನವೇ ಕೈಹಿಡಿದು ನಡೆಸೆಯಾ?
ಸಂಕಷ್ಟದ ಸಂದಿಗ್ಧತೆಯಲಿ
ಕೈ ಚೆಲ್ಲುವ ಮುನ್ನ
ಮೌನವೇ ಅರಿವಿನ ಗುರುವ ತೋರೆಯಾ?
ತಪವೆ ನೀ ತೊರೆಯದಿರು
ನಾ ಕುಸಿಯುವ ಮುನ್ನ
ಮೌನವೇ ಘನಶಕ್ತಿಯಾಗೆಯಾ?

೧೪. ರೇಣುಕಾ ದೇಸಾಯಿ

ಹೊಸ ಸಂವತ್ಸರದ ಆಗಮನ

ಬಾಸ್ಕರನು ಹೂಡಿದನು
ಬಿರು ಬಿಸಿಲಿನ ಬಾಣ
ಭೂಮ್ತಾಯ ಒಡಲಿಗೆ
ಪಶು ಪಕ್ಷಿ ಚರಾಚರ
ಹೂ ಗಿಡ ಬಳ್ಳಿ
ಸೊರಗಿದವು ಧಗೆಗೆ
ಕ್ಷಮಯಾ ಧರಿತ್ರಿ
ಎಂದವಳ ಹೆಸರು
ನಸುನಕ್ಕಳು ಆದಿತ್ಯನೆಡೆಗೆ
ತಲೆಬಾಗಿದ ಬಾನುಪ್ರಿಯ
ತೆಲುತೇಲುತ ನಡೆದ
ಆ ಶುಭ್ರ ನೀಲಾಕಾಶದೆಡೆಗೆ
ನನ್ನ ಮಾಯೆಯ ನೋಡಿಲ್ಲಿ
ಎಂದೆನುತ ಹರಿಸಿದಳು ಅಮೃತ
ದೃಷ್ಟಿ ಗಿಡ ಮರಗಳೆಡೆಗೆ
ಗಿಡ ಮರಗಳೆಲ್ಲ ನಳನಳಿಸಿ
ನಗುತಿರೆ ಉಲ್ಲಾಸದಲಿ
ಹಸಿರು ಸೀರೆ ಹೊದ್ದು ಹರಸಿರೆ ಬಾನಾಡಿಗೆ
ನವಿಲು ಕುಣಿಯಿತು ಕೋಗಿಲೆ ಹಾಡಿತು
ದನಕಾಯಿ, ದಾರಿಹೋಕರು ಗೋಮಾತೆಯರು
ಪವಡಿಸಿದರು ನೆರಳಿನಡಿಗೆ
ಮಾವು ಬೇವು ಹೊಂಗೆ ಹೂವ ಹಾಸು ಎಲ್ಲೆಡೆ
ಬೇವಿನ ಹೂವಿಗೆ ದುಂಬಿಯ ಅಪ್ಪುಗೆ
ಹೊಂಗೆ ಹೂವಿನ ಗಮ ಅಡಿಗಡಿಗೆ
ಇದೋ!! ಬಂದಿತು ಯುಗಾದಿ!!
ಹೊಸತು ಸಂತಸ ತಂದಿತು
ಸಡಗರದಿ ಬಂದಿತು ಯುಗಾದಿ ನಾಡಿನೆಡೆಗೆ

ಹೊಸತೆಂದರೆ ಅದೇ ಯುಗಾದಿ

ನಾನು ದಿನವೂ ಕಿಟಕಿಯಿಂದ
ನೋಡುತ್ತಿರುವ ಮರವು
ಹಸಿರು ಹೊದ್ದು ಹೊಸದಂತೆ ನಳನಳಿಸುತ್ತಿದೆ
ಯುಗಾದಿ ಬಂದಿತೇನೋ?
ಹೊಸದೆಂದರೆ, ಯುಗಾದಿ ಎಂದಾದಾಗ
ಇರುವ ಕ್ಷಣ ಕ್ಷಣವೂ ಹೊಸದಲ್ಲವೇ?
ಹಳೆಯದೇನಿದೆ ಇಲ್ಲಿ?
ಇಂದು ಇದ್ದ ಬೆಳಗು ನಾಳೆಯ ಬೆಳಗಾದೀತು ಹೇಗೆ?
ನಿನ್ನೆಯದಂತೂ ಅಲ್ಲವೇ ಅಲ್ಲ
ಅದೇ ಬೆಳಗು ಅದೇ ಬೈಗು
ಹಾಗಿದ್ದರೂ ಇದು ಇಂದಿನ ಬೆಳಗು-ಬೈಗು
ಅದು ನಿನ್ನೆಯ ಬೆಳಗು-ಬೈಗು ಇಂದಿನದೇಂತಾದೀತು?
ಇಂದಿನ ಊಟ, ಇಂದಿನ ನೋಟ
ಎಲ್ಲ ಹೊಸದು ಹೊಸದು
ನಿನ್ನೆಯ ಊಟ ನೋಟವೇ ಬೇರೆ
ನಾಳೆಯದಂತೂ ಅಲ್ಲವೇ ಅಲ್ಲ
ನಿನ್ನೆಯಿದ್ದ ಚಂದ್ರನಂತೆ ಇಂದಿಲ್ಲ
ಅವನಲ್ಲೂ ಸ್ವಲ್ಪ ಬದಲಾವಣೆ
ಹೀಗಾಗಿ ಅವನು ನಿತ್ಯ ನೂತನ
ದಿನದಿನವೂ ಹೊಸದು ಹೊಸದು
ರವಿಕಿರಣ ಸುಡುತಿದೆ ಇಂದು
ನಿನ್ನೆಯಂತಲ್ಲ ಅದರಲ್ಲೂ ಒಂದಿನಿತು ಬೇರೆ
ಬಾಗಿದೆಯಲ್ಲ ಸ್ವಲ್ಪ!! ನಿನ್ನೆಯದು ನಿನ್ನೆಗೆ
ಹೊಸದು ಇಂದಿನದು ಇಂದು
ಹೀಗಿದ್ದಾಗ ಅನುದಿನವೂ ಯುಗಾದಿ
ಅನುದಿನವೂ ಹೊಸದು ಹೊಸತು
ಅದು ದುಃಖವಿರಲಿ, ದುಗಡವಿರಲಿ
ನೋವು ನಲಿವಿರಲಿ ನಿತ್ಯ ನೂತನ
ಪ್ರತಿದಿನ ಯುಗಾದಿಯಂತಾಗಲಿ
ಬಾಳ ನೋಡುವ ನೋಟ ಹೊಸದಾಗಲಿ

೧೫. ಗುರುರಾಜ ಶಾಸ್ತ್ರಿ

ವಿಚಿತ್ರ ವ್ಯಕ್ತಿಗಳು

'ದೊಡ್ಡಪ್ಪಂದು ಪೂರ್ಣಾಯಸ್ಸು, ತೊಂಬತ್ತು ವರ್ಷ ಬದುಕಿದ್ದರು ಅಲ್ವೇ' ಎಂದಾಗ 'ಹೌದು ಅಮೇರಿಕಾದಲ್ಲೂ ಎಲ್ಲರೂ ಹೆಚ್ಚು ದಿನ ಬದುಕುತ್ತಾರೆ' ಎಂದ.

'ಒಳ್ಳೇ ಆಸ್ಪತ್ರೆಗೆ ತೋರಿಸಿದ್ದರೆ ಇನ್ನೂ ಹೆಚ್ಚು ದಿನ ಬದುಕುತ್ತಿದ್ದರೇನೋ' ಎಂದಾಗ, 'ಅಮೇರಿಕಾದಲ್ಲಿ ಒಳ್ಳೆಯ ಆಸ್ಪತ್ರೆಗಳಿವೆ' ಎಂದ.

'ಇತ್ತೀಚೆಗೆ ಸ್ಮಶಾನಗಳನ್ನೂ ದೇವಸ್ಥಾನಗಳಂತೆ ತುಂಬಾ ಸ್ವಚ್ಛವಾಗಿ ಇಡುತ್ತಿದ್ದಾರೆ ಅಲ್ವೇ' ಎಂದಾಗ, 'ಹೌದು ಅಮೇರಿಕಾದಲ್ಲೂ ಕ್ರೆಮೆಟೋರಿಯಮ್ ತುಂಬಾ ಚೆನ್ನಾಗಿರುತ್ತೆ' ಎಂದ.

ಇದು ಕಳೆದ ವರ್ಷ ನನ್ನ ದೊಡ್ಡಪ್ಪ ಸತ್ತ ಸಂದರ್ಭದಲ್ಲಿ ನನ್ನ ಮತ್ತು ನನ್ನ ದೂರದ ನೆಂಟ ಗಣೇಶನೊಂದಿಗೆ ನಡೆದ ಮಾತುಕತೆ. ಈ ಗಣೇಶನ ತಂಗಿ ಸುಬ್ಬಮ್ಮ ಬಂದು, "ಒಂದು ಸಾರಿ ಅಮೇರಿಕಾ ಬಗ್ಗೆ ನಿನಗೆ ಹೇಗೆ ಗೊತ್ತು ಅಂತಾ ಕೇಳ್ಬುಡು, ಅವನು ಅವನ ಮಗನ ಮನೆಗೆ ಹೋಗಿದ್ದು ಎಲ್ಲವನ್ನೂ ವಿವರವಾಗಿ ವದರಿ ಬಿಡ್ತಾನೆ, ಇಲ್ಲವಾದರೆ ನೀನು ಹೇಳುವ ಪ್ರತಿಯೊಂದು ವಾಕ್ಯಕ್ಕೂ ಅಮೇರಿಕಾ ಹೆಸರು ಮಧ್ಯದಲ್ಲಿ ತರುತ್ತಿರುತ್ತಾನೆ" ಎಂದು ಜೋರಗಿ ಹೇಳಿದಳು. ಆಗ ನನಗೆ ಅರಿವಾಯಿತು ನನ್ನ ತಪ್ಪು.

ಹೌದು ಈ ರೀತಿಯ ವಿಚಿತ್ರ ಮನುಷ್ಯರನ್ನು ನೀವೂ ಎಲ್ಲರೂ ನೋಡಿರುತ್ತೀರಿ ಅಲ್ಲವೇ. ನಮ್ಮಲ್ಲೇ ಕೆಲವರು ಈ ರೀತಿಯ ಮನುಷ್ಯರೇ ಆಗಿದ್ದರೇ ಆಶ್ಚರ್ಯವೇನಿಲ್ಲ. ಈ ಗಣೇಶನೊಂದಿಗೆ ಆದ ಸಂವಾದ ನನಗೆ ಹಲವರೊಂದಿಗೆ ಮಾತನಾಡಿದಾಗ ಅಗಿದ್ದುಂಟು. ವೇದಿಕೆಯಲ್ಲಿ ಯಾರೋ ಒಬ್ಬರು ಅತಿಥಿಗಳು ಭಾಷಣ ಮಾಡುವಾಗ, "ಸಾರ್ ಅವರು ಅವರ ಮಕ್ಕಳು ಅಮೇರಿಕಾದಲ್ಲಿ ಇರುವ ವಿಷಯ ಹೇಳದೇ, ಭಾಷಣ ನಿಲ್ಲಿಸುವುದಿಲ್ಲ" ಎಂದು ಸಂಚಾಲಕರಿಗೆ ಹೇಳಿದ್ದೆ. ಆದರೆ ನನ್ನ ಊಹೆ ತಪ್ಪಾಗಿತ್ತು, ಅವರು ಆರಂಭಿಸಿದ್ದೇ ಅಮೇರಿಕಾ ವಿಷಯ ಪ್ರಸ್ತಾಪಿಸುತ್ತಾ.

ಈ ರೀತಿ ಏಕೆ ಮಾತನಾಡುತ್ತಾರೆ ಎಂದು ಹಿಂದೆ ಒಮ್ಮೆ ನಾನು ಸಂಶೋಧನೆ ಮಾಡಿದ್ದೂ ಉಂಟು. ಒಂದು, ನಾವೇ ಅಮೇರಿಕಾಗೆ ಹೋಗಿದ್ದೇವೆ ಎನ್ನುವ ದರ್ಪಕ್ಕಿರಬಹುದೇ, ಅಥವಾ ಇದೊಂದು ಮನೋರೋಗವಿರಬಹುದೇ ಅಥವಾ

ತಾತ್ಕಾಲಿಕ ಮನಃಸ್ಥಿತಿ ಇರಬಹುದೇ. ಇರಲಿ ಬಿಡಿ ಆ ಸಂಶೋಧನೆಯು ಆಗ ಯಾವುದೇ ನಿರ್ಣಯಕ್ಕೆ ನನಗೆ ಬರಲು ಸಹಾಯ ಮಾಡಲಿಲ್ಲ.

ತಮ್ಮ ಹತ್ತಿರದಲ್ಲಿ ಮಕ್ಕಳಿಲ್ಲ ಎಂಬ ದುಃಖ ಮನದಲ್ಲಿ ಕಾಡುತ್ತಿದ್ದರೂ ಇತರರಲ್ಲಿ ತಮ್ಮ ಮಕ್ಕಳು ಬೇರೆ ದೇಶದಲ್ಲಿ ಇರುವುದನ್ನು ಹೇಳಿಕೊಳ್ಳುವುದು ಅದರಲ್ಲೂ ಜೋರಾದ ಧ್ವನಿಯಲ್ಲಿ ಹೇಳುವುದು ಒಂದು ಹೆಮ್ಮೆಯ ವಿಷಯವಾಗಿಯೇ ತೋರುತ್ತದೆ ಎಂದು ನನಗೆ ಆತ್ಮೀಯರಾಗಿದ್ದ ಒಬ್ಬರು ಹೇಳಿದ್ದುಂಟು. ಇದು ನಿಮಗೆ ತಿಳಿಯಬೇಕೆಂದರೆ ಆ ತಂದೆತಾಯಿಗಳ ಆಪ್ತವಲಯದಲ್ಲಿ ನೀವಿರಬೇಕಷ್ಟೇ. ಬೆಳಗ್ಗೆ ವಾಯುವಿಹಾರಕ್ಕೆ ಪಂಚೆ ಉಟ್ಟು ಬಿಳಿ ಬನಿಯನ್ ಧರಿಸುತ್ತಿದ್ದ ಅಂಕಲ್ ಒಮ್ಮೆಗೇ ಬರ್ಮುಡಾ ಮತ್ತೆ ಟೀಶರ್ಟ್ ಧರಿಸಲು ಆರಂಭಿಸಿದರೆ ಅರ್ಥ ಮಾಡಿಕೊಳ್ಳಬೇಕು ಅವರ ಮಗನೋ ಮಗಳೋ ಅಮೇರಿಕಾ ಸೇರಿದ್ದಾರೆಂದು. ಮೊಸರು ಅನ್ನೋ ಬದಲು ಯೋಗರ್ಟ್ ಅನ್ನೋದು, ಕುಡಿಯೋ ನೀರು ಅನ್ನೋ ಕಡೆ ಬಾಟಲ್ಡ್ ವಾಟರ್ ಅನ್ನೋದು, ಸಾಲ ಅನ್ನೋ ಕಡೆ ಮಾರ್ಟ್‌ಗೇಜ್ ಅನ್ನೋದು ಹೀಗೆ ಇನ್ನೂ ಹಲವಾರು ಉದಾಹರಣೆಗಳಿಂದ ಈ ವಿಚಿತ್ರ ವ್ಯಕ್ತಿಗಳನ್ನು ಗುರುತಿಸಬಹುದು.

ಹೀಗೇಕೆ ಆಗುತ್ತದೆ ಎಂದು ನನಗೆ ನಿಖರವಾಗಿ ತಿಳಿದದ್ದು ನಾನು ಈಜಿಪ್ಟಿನಿಂದ ಬಂದ ಮೇಲೆ. ನಾನೂ ಸಹ ಈ ವಿಚಿತ್ರ ವ್ಯಕ್ತಿಗಳಲ್ಲಿ ಒಬ್ಬನಾದೆ. ಯಾರು ಏನೇ ಮಾತನಾಡಿದರು, ನಾನು ನನ್ನ ಈಜಿಪ್ಟ್ ಪ್ರವಾಸದ ಒಂದು ಘಟನೆ ಮಧ್ಯ ತರುತ್ತಿದ್ದೆ. ಗೆಳೆಯನೊಬ್ಬ ಒಮ್ಮೆ ನನ್ನನ್ನು ವಿಚಿತ್ರವಾಗಿ ನೋಡಿದಮೇಲೆ ನನಗೆ ಅರ್ಥವಾಗಿದ್ದು ನಾನು ಏನು ತಪ್ಪು ಮಾಡುತ್ತಿದ್ದೇನೆಂದು. ಈಗ ನನ್ನ ಹಳೆಯ ಸಂಶೋಧನೆ ಮುಂದುವರೆಸಲು ಅವಕಾಶ ಸಿಕ್ಕಿತ್ತು. ನನ್ನ ಈಜಿಪ್ಟಿನ ಪ್ರವಾಸದ ನಂತರದ ಒಂದು ತಿಂಗಳಿನ ನನ್ನ ಮನಃಸ್ಥಿತಿಯನ್ನು ಅರ್ಥಮಾಡಿಕೊಳ್ಳಲಾದರೆ ಅದೇ ಸಂಶೋದನೆ.

ನನಗೆ ಅರಿವೇ ಇರಲಿಲ್ಲ ನಾನು ಬೇರೆ ದೇಶದ ವಿಷಯ ಆಗಾಗ ಮಾತಿನ ಮಧ್ಯೆ ತರುತ್ತಿದ್ದೇನೆಂದು. ಹೀಗಿದ್ದ ಮೇಲೆ ಇದು ಅಹಂಕಾರ ಅಥವಾ ದರ್ಪ ತೋರಿಸಲು ಅಲ್ಲವೆಂಬುದು ಮತ್ತು ಇದು ರೋಗವೂ ಅಲ್ಲ ಎಂಬುದು ಖಾತ್ರಿಯಾಯಿತು. ಕಡೆಗೆ ನಾನು ನಿರ್ಧಾರಕ್ಕೆ ಬಂದೆ ಇದೊಂದು ಪರರಿಗೆ ತೊಂದರೆಯಾಗುತ್ತಿದ್ದೆ ಎಂದು ನಮಗೆ ಅರಿವಾಗದ ಒಂದು ಮನಃಸ್ಥಿತಿಯಷ್ಟೆ.

ಸರಿ ಹಾಗಾದರೆ ಇದಕ್ಕೆ ಪರಿಹಾರವೂ ಇರಬೇಕಲ್ಲ. ಪರಿಹಾರ ಹುಡುಕಲು ಆರಂಭಿಸಿದಾಗ ನನಗೆ ಮೊದಲು ಜ್ಞಾಪಕಕ್ಕೆ ಬಂದದ್ದು ನಮ್ಮ ಸಮನ್ವಯ ಸಮಿತಿಯ ಇಬ್ಬರು ಮಹಿಳಾ ಸದಸ್ಯರು. ಒಬ್ಬರು ಅಮೇರಿಕಾಗೆ ಹೋಗಿ ತಮ್ಮ ಅನುಭವವನ್ನೆಲ್ಲಾ ಪುಸ್ತಕ ರೂಪದಲ್ಲಿ ಪ್ರಕಟಿಸಿದರು, ಮತ್ತೊಬ್ಬರು ತಮ್ಮ ಸ್ವೀಡನ್ ಪ್ರವಾಸ ಜಾರಿಯಲ್ಲಿದ್ದಾಗಲೇ ಅಲ್ಲಿ ಅವರಿಗಾಗುತ್ತಿದ್ದ ಅನುಭವಗಳನ್ನು ಎಲ್ಲರೊಂದಿಗೆ

ಬರವಣಿಗೆಯಲ್ಲಿ ವಾಟ್ಸಾಪ್ ಮೂಲಕ ಹಂಚಿಕೊಂಡಿದ್ದರು. ಹೀಗೆ ಮಾಡಿ ಅವರು ವಿಚಿತ್ರ ವ್ಯಕ್ತಿಯಾಗುವುದನ್ನು ತಪ್ಪಿಸಿಕೊಂಡರು. ನಾನು ಕಂಡಂತೆ ಈ ಸಮಸ್ಯೆಗೆ ಇದಕ್ಕಿಂತ ಉತ್ತಮವಾದ ಪರಿಹಾರ ಇಲ್ಲ. ತಲೆಯಲ್ಲಿದ್ದ ಆ ವಿದೇಶದ ಭೂತ ಪುಸ್ತಕಕ್ಕೆ ಅಥವಾ ವಾಟ್ಸಾಪಿಗೆ ವರ್ಗಾಯಿಸಿದಂತೆ. ಒಂದೇ ಒಂದು ಇದರ ಅಡ್ಡ ಪರಿಣಾಮವೆಂದರೆ, ಲೇಖನ ಪ್ರಕಟಿಸಿದ ನಂತರ, ನೀವೇ ಬೇರೆ ದೇಶದ ಬಗ್ಗೆ ಹೇಳುವ ಬದಲು, ಬೇರೆಯವರೇ ನಿಮ್ಮನ್ನು ಇದರ ಬಗ್ಗೆ ಆಗಾಗ ಕೇಳಲು ಪ್ರಾರಂಭಿಸುತ್ತಾರೆ.

ಇದಕ್ಕೆ ತದ್ವಿರುದ್ದವಾಗಿರುವ ಕೆಲವು ವ್ಯಕ್ತಿಗಳೂ ಇದ್ದಾರೆ. ಅವರಿಗೆ ಕಾಂಬೋಡಿಯಾಗೆ ಕರೆದುಕೊಂಡು ಹೋಗಿ ಅಲ್ಲಿರುವ ಶಿಲ್ಪಕಲೆಯನ್ನು ನೋಡಿರಿ ಎಂದರೆ, ಅವರು "ನಮ್ಮ ಬೇಲೂರು ಹಳೇಬೀಡು ನೋಡಿದ್ದೀರಾ, ಅಲ್ಲಿ ಹೇಗಿದೆ ಎಂದರೆ" ಅಂತ ಮಾತು ಆರಂಭಿಸಿ, ತಾವೂ ಯಾತ್ರಾ ಸ್ಥಳದ ಶಿಲ್ಪಕಲೆ ನೋಡುವುದಿಲ್ಲ ಮತ್ತು ಬೇರೆಯವರಿಗೂ ನೋಡದಂತೆ ಮಾಡುತ್ತಾರೆ. ಎಲ್ಲಿ ಯಾವಾಗ ಪ್ರವಾಸ ಮಾಡುತ್ತೀವೋ ಅಲ್ಲೇ ನಮ್ಮ ಮನಸ್ಸಿಡಬೇಕು. ಆಮೇಲೆ ಬೇಕೆನಿಸಿದರೆ ಪ್ರವಾಸ ಕಥನ ಬರೆದು ಅಲ್ಲಿಗೂ ಇಲ್ಲಿಗೂ ಹೋಲಿಸಿ ಬರೆಯಿರಿ.

ನನ್ನ ಈಜಿಪ್ಟ್ ಪ್ರವಾಸದಲ್ಲಿ ಒಬ್ಬ ಪ್ರವಾಸಿಗರು ಒಂದು ಅಣೆಕಟ್ಟು ನೋಡುತ್ತಾ "ಎಷ್ಟು ಚೆನ್ನಾಗಿದೆ ಅಲ್ವಾ, ಈ ರೀತಿಯ ಅಣೆಕಟ್ಟು ನಿರ್ವಹಣೆ ಭಾರತದಲ್ಲಿಲ್ಲವೇ ಇಲ್ಲ" ಎಂದರು. ನಾನು ಅವರಿಗೆ ಭಾರತದಲ್ಲಿ ನೀವು ಎಷ್ಟು ಅಣೆಕಟ್ಟು ನೋಡಿದ್ದೀರಿ ಎಂದು ಕೇಳಿದಾಗ ಅವರು ಒಂದೂ ನೋಡಿಲ್ಲವೆಂದರು. ಹಾಗಾದರೆ ಅಲ್ಲಿನದೂ ಇಲ್ಲಿನದೂ ಹೋಲಿಸಲು ಹೇಗೆ ಸಾಧ್ಯ ಎಂದಾಗ, 'ಅದು ಹಾಗೆ ಇರಬಹುದು ಅಂದುಕೊಂಡೆ' ಎನ್ನುತ್ತಾರೆ.

ಈ ರೀತಿಯ ವಿಚಿತ್ರ ವ್ಯಕ್ತಿಗಳನ್ನು ನಾವು ಸದಾ ನೋಡುತ್ತಲೇ ಇರುತ್ತೇವೆ ಮತ್ತು ಆಗಾಗ ನಾವು ಹಾಗೇ ಆಗಿಬಿಟ್ಟಿರುತ್ತೇವೆ. ಬೇರೆಯವರನ್ನು ನಾವು ಬದಲಾಯಿಸುವುದು ಕಷ್ಟ. ಅವರಿಗೆ ಅನುಕಂಪ ತೋರೋಣ, ಹಾಗೆಯೇ ನಾವೂ ಆ ವಿಚಿತ್ರ ವ್ಯಕ್ತಿಯಾಗುವುದಿಲ್ಲ ಎಂದು ಪ್ರತಿದಿನ ಬೆಳಗ್ಗೆ ಎದ್ದಾಗ ಸಂಕಲ್ಪ ಮಾಡೋಣ.. ಅದರಲ್ಲೂ, ಯಾವುದಾದರೂ ವಿದೇಶ ಪ್ರವಾಸ ಮುಗಿಸಿ ಬಂದ ಮೇಲೆ ಈ ರೀತಿಯ ಸಂಕಲ್ಪ ಹೆಚ್ಚು ಮಾಡಬೇಕಾಗುತ್ತದೆ.

ನೀವೇನಂತೀರಿ........

೧೬. ವಿಠ್ಠಲ್ ಇಜೇರಿ

ಕಥಾ ಪ್ರಪಂಚ : ಸ್ವಾಮಿ ವಿವೇಕಾನಂದರ ಕಥಾ ಸಂಚಯ
ಕನ್ನಡದಲ್ಲಿ ಸಂಗ್ರಹಿದವರು ಡಾ. ಕೆ. ಅನಂತರಾಮ,
(ಪ್ರಕಟಣೆ ರಾ. ಕೃ. ಆಶ್ರಮ, ಮೈಸೂರು)

ಧರ್ಮವನ್ನು ತಿಳಿಯಲು, ಅದರ ಸೂಕ್ಷ್ಮವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಕಥೆಗಳು ಮತ್ತು ಉಪಮೆಗಳು ಅವಶ್ಯಕ. ಎಲ್ಲ ಧರ್ಮ ಗ್ರಂಥಗಳಲ್ಲಿ ಅಂದರೆ ಉಪನಿಷತ್ತು, ಬೈಬಲ್, ಯೇಸುಕ್ರಿಸ್ತ, ಬುದ್ಧರಂಥವರ ಉಪದೇಶಗಳಲ್ಲಿ ಸುಂದರವಾದ ಕತೆಗಳು ಮತ್ತು ಉಪಕತೆಗಳನ್ನು ಕಾಣಬಹುದು. ಇಂಗ್ಲಿಷನಲ್ಲಿ ಪರೆಬಲ್ಸ್ ಎಂದು ಕರೆಯಲಾಗುವ ದೃಷ್ಟಾಂತ ಕತೆಗಳಲ್ಲಿ ಸರಳ, ಸುಂದರ ಭಾಷೆಯಲ್ಲಿ ಅತೀ ಸಾಮಾನ್ಯ ಘಟನೆಗಳ ಮೂಲಕ ಜನಸಾಮಾನ್ಯರಿಗೆ ಅರ್ಥವಾಗುವಂತೆ ಉದಾತ್ತ ತತ್ವಗಳನ್ನು ತಿಳಿಸುವುದನ್ನು ಕಾಣುತ್ತೇವೆ.

ಶ್ರೀ ರಾಮಕೃಷ್ಣರು ಭಕ್ತರೊಂದಿಗೆ ಮಾತನಾಡುವಾಗ ಅನೇಕ ದೃಷ್ಟಾಂತ ಕತೆಗಳನ್ನು ಬಳಸುತ್ತಿದ್ದರು. ಹಳ್ಳಿಯ ಜನರ ದೈನಂದಿನ ಘಟನೆಗಳ ಮೂಲಕ, ಪೇಟೆಯವರ ನಡವಳಿಕೆಗಳ ಮೂಲಕ ಹಾಸ್ಯದ ಹೊನಲನ್ನೇ ಹರಿಸುತ್ತಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಿಂದ ಕಲಿತ ವಿಚಾರಗಳನ್ನು ಹಾಗೂ ತಮ್ಮ ಅಸಾಧ್ಯ ಬುದ್ಧಿಮತ್ತೆಯನ್ನು ಬಳಸಿ ಸುಂದರ ರೂಪಕ ಕತೆಗಳನ್ನು ತಮ್ಮ ಪ್ರವಚನಗಳಲ್ಲಿ ಮಾತುಕತೆಗಳಲ್ಲಿ ಮತ್ತು ಚರ್ಚೆಗಳಲ್ಲಿ ಹೇಳುತ್ತಿದ್ದರು. ಅವರು ಆಂಗ್ಲ ಸಾಹಿತ್ಯದ ಕೆಲವು ಉದಾಹರಣೆಗಳನ್ನೂ ಕೊಡುತ್ತಿದ್ದರು. ಸ್ವಾಮೀಜಿ ಸತ್ಯವನ್ನು ನಿರ್ಭಯವಾಗಿ ಮಂಡಿಸುತ್ತಿದ್ದರು. ಅವರ ಮಾತುಗಳಲ್ಲಿ ವಿದ್ವತ್ತಿನ ಶಕ್ತಿ ಇದೆ. ತಮಸ್ಸನ್ನು ಕಳೆಯುವ ಜ್ಞಾನ ಕಿರಣವಿದೆ. ಅವರ ಕತೆಗಳನ್ನು ಓದುವುದು ಒಂದು ಅವಿಸ್ಮರಣೀಯ ಅನುಭವ. ಅವರು ಆಡು ಮುಟ್ಟದ ಸೊಪ್ಪಿಲ್ಲ ಅನ್ನುವಂತೆ ವಿವೇಕಾನಂದರು ಪರೀಕ್ಷಿಸದ ವಿಷಯಗಳಿಲ್ಲ. ಸಮಾಜಸೇವೆ, ಜನಜಾಗ್ರತಿ, ಶಿಕ್ಷಣಪದ್ಧತಿ, ಯುವಪೀಳಿಗೆಯ ಏಳಿಗೆ, ಸ್ತ್ರೀಯರ ಅಭ್ಯುದಯ, ಮಾನಸಿಕ ಚಿಂತನೆಗಳು ಹೀಗೆ ಹತ್ತಾರು ವಿಷಯಗಳ ಬಗ್ಗೆ ಕತೆಗಳನ್ನು ಹೇಳಿದ್ದಾರೆ. ಅಲ್ಲಲ್ಲಿ ಬಳಸಲಾದ ಕತೆಗಳನ್ನು ಮೈಸೂರಿನ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮು ಅವರು ಸ್ವಾಮಿ ವಿವೇಕಾನಂದರ ಕಥಾ ಸಂಚಯದಲ್ಲಿ 120 ಕತೆಗಳನ್ನು ಕ್ರೋಢಿಕರಿಸಿದ್ದಾರೆ. ಅವುಗಳಲ್ಲಿ ಅವರು ತಮ್ಮ ಅತಿಥಿಗಳಿಂದ ಕೇಳಿದ ಒಂದು ಕತೆಯ ಮಾನಸಿಕ ವಿಶ್ಲೇಷಣೆಯನ್ನು ನೋಡೋಣ.

ಸ್ವಾಮಿ ವಿವೇಕಾನಂದರು ಬೆಳಗಾವಿಗೆ ಬಂದಾಗ ಕೆಲವು ದಿನಗಳು ಹರಿಪದ ಮಿತ್ರ ಎಂಬ ಅರಣ್ಯ ಅಧಿಕಾರಿಯ ಅತಿಥಿಗಳಾಗಿದ್ದರು. ಹರಿಪದ ಮಿತ್ರರಿಗೆ ಬಾಲ್ಯದಲ್ಲಿ ಹುಚ್ಚರೊಡನೆ ಮಾತನಾಡುವ ಅಭ್ಯಾಸವಿತ್ತು. ಒಂದು ಸಲ ಅವರಿಗೆ ಒಬ್ಬ ಬುದ್ಧಿವಂತ

ಹುಚ್ಚ ಸಿಕ್ಕಿದ. ಅವನಿಗೆ ಇಂಗ್ಲಿಷ್ ಮಾತನಾಡಲು ಬರುತ್ತಿತ್ತು. ಅವನ ವೇಷ ಭಿಕ್ಷುಕನಂತೆ ಇತ್ತು, ಮತ್ತು ಅವನ ಬಳಿ ಒಡೆದು ಹೋದ ಮಡಿಕೆ ಇತ್ತು. ಅದರಲ್ಲಿ ಅವನು ಆಗಾಗ ನೀರು ಕುಡಿಯುತ್ತಿದ್ದ. ಅವನು ನೀರು ಕಂಡಲ್ಲೆಲ್ಲ ಆ ಒಡೆದ ಮಡಿಕೆಯಲ್ಲಿ ನೀರು ತುಂಬಿ ಕುಡಿಯುತ್ತಿದ್ದ. ಹರಿಪದ ಮಿತ್ರ ಅವರು " ಈ ಒಡೆದ ಮಡಿಕೆ ಏಕೆ ಇರಿಸಿಕೊಂಡಿರುವಿ?, ನಿನಗೊಂದು ಹೊಸ ಮಡಿಕೆ ಕೊಡಿಸುವೆ. " ಅಂದರು. ಹುಚ್ಚ " ಬೇಡಿ, ಇದೇ ಸಾಕು, ಹೊಸ ಮಡಿಕೆಯಾದರೆ ಕಳ್ಳತನದ ಭಯವಿದೆ " ಅಂದ. ಹರಿಪದ ಮಿತ್ರ " ಹೌದು, ನೀನುಕಂಡ ಕಂದಲ್ಲೆಲ್ಲ ಇಷ್ಟೊಂದು ನೀರು ಯಾಕೆ ಕುಡಿಯುವಿ?.

ಹುಚ್ಚ : ಸ್ವಾಮಿ, ನೀರು ಅಂದರೆ ಸುಮ್ಮನೆ ಆದೀತೆ? ಅದಕ್ಕೆ ಸಮನಾವುದಿದೆ? ಅದು ಆಹಾರಕ್ಕೂ ಪ್ರತಿನಿಧಿ, ಉಪವಾಸಕ್ಕೂ ಪ್ರತಿನಿಧಿ.

ಹರಿಪದ ಮಿತ್ರ : ಅದೇನೋ ಸರಿ, ಆದರೆ ಆ ಒಡಕು ಮಡಿಕೆ ಏಕೆ? ಹೊಸ ಮಡಿಕೆ ಕೊಡಿಸುವೆ ತೆಗೆದುಕೋ?

ಹುಚ್ಚ : ಬೇಡ ಸ್ವಾಮಿ ಬೇಡ ಇದು ಒಡೆದ ಮಡಿಕೆಯಾಗಿದ್ದರಿಂದ ಇಷ್ಟು ದಿನ ನನ್ನೊಡನೆ ಉಳಿದಿದೆ. ಒಳ್ಳೆಯ ಮಡಿಕೆಯಾಗಿದ್ದರೆ ಈ ವೇಳೆಗೆ ಯಾರಾದರೂ ಕಳ್ಳನ ಪಾಲಾಗುತ್ತಿತ್ತು.

ಈ ಕತೆ ಕೇಳಿದ ಸ್ವಾಮೀಜಿ

" ಅವನೊಬ್ಬ ಮೋಜಿನ ವ್ಯಕ್ತಿಯೇ ಸರಿ. ಅಂಥವರನ್ನು ಮಾನೋ ಮೇನಿಯಕ್ ಎಂದು ಕರೆಯುತ್ತಾರೆ. ನಮ್ಮೆಲ್ಲರಲ್ಲಿ ಏನಾರದೊಂದು ಮಾನಸಿಕ ತೊಂದರೆ ಇದ್ದೇ ಇರುತ್ತದೆ.

ನಾವು ಆ ಜಾಡ್ಯವನ್ನು ಬಚ್ಚಿಡುವ ಕಲೆ ತಿಳಿದಿರುತ್ತೇವೆ. ಆದರೆ ಮಾನಸಿಕ ಸಮತೋಲನ ತಪ್ಪಿದವರಲ್ಲಿ ಆ ಶಕ್ತಿ ಇರುವುದಿಲ್ಲ. ಕಾಯಿಲೆ, ಶೋಕ, ಅಹಂಕಾರ, ವ್ಯಾಮೋಹ, ಅಸೂಯೆ ಇತ್ಯಾದಿ ಕ್ಲೇಶಗಳಿಗೆ ಒಳಗಾಗಿ ಆತ್ಮ ನಿಗ್ರಹ ಕಳೆದುಕೊಂಡವರು ದುಃಖಕ್ಕೆ ಈಡಾದವರು ದುಃಖವನ್ನು ಹತೋಟಿಯಲ್ಲಿ ಇಡಲಾರದವರು ಹೊರಹಾಕಿ ಬಿಡುತ್ತಾರೆ. ನಾವು ಅವರನ್ನು ಹುಚ್ಚರೆಂದು ಕರೆಯುತ್ತೇವೆ. ಸ್ವಾಮಿ ವಿವೇಕಾನಂದರು ಮನಃ ಶಾಸ್ತ್ರವನ್ನು ಅಭ್ಯಸಿಸಿದ್ದರು. ಈ ಕತೆಯಲ್ಲಿಯ ಹುಚ್ಚನು ಈ ಲೋಕದಲ್ಲಿ ಇರುವುವರಲ್ಲಿ ಯಾರನ್ನೂ ನಂಬುತ್ತಿಲ್ಲ, ಎಲ್ಲರನ್ನು ಕಳ್ಳರೆಂದೇ ಅಂದುಕೊಂಡಿದ್ದನು.

೧೭. ಕೆ.ಎನ್.ಭಗವಾನ್

ಹೀಗೊಂದು ಎಡವಟ್ಟು...

ಹೀಗಾಗಬಾರದಿತ್ತು...
.ಏನು ಮಾಡೋದು, ಅಪರೂಪಕ್ಕೊಮ್ಮೆ ಹೀಗೆ ಆಗಿಬಿಡುತ್ತೆ ! ಇಂಥ ಎಡವಟ್ಟಿಗೆ ಅತ್ಯುತ್ಸಾಹ ,ಅತಿವಿಶ್ವಾಸಗಳೇ ಕಾರಣ ಎಂಬುದು ನನ್ನ ಅನುಭವಕ್ಕೆ ಬಂತ ಮಾತು..

ಮನೆಮಂದಿಯಲ್ಲ ಆ ಸಂಜೆ ರೈಲಿನಲ್ಲಿ ಹೈದರಾಬಾದಿಗೆ ಹೊರಟಿದ್ದಿವಿ. ನನ್ನ ಹಿರಿಯ ಸೊಸೆಯ ತಂಗಿ ವಾಸುಕಿ ಅಲ್ಲಿದ್ದ ಕಾರಣ. 'ನನ್ನ ಮದುವೆಯಾದ ನಂತರ ಒಂದು ಸಾರೀನೂ ನೀವು ಇಲ್ಲಿಗೆ ಬಂದಿಲ್ಲ. ಈ ಬೇಸಿಗೆ ರಜಕ್ಕೆ ಅಕ್ಕನಿಗೂ,ನಿಮ್ಮ ಮೊಮ್ಮಕ್ಕಳಿಗೂ ಸ್ಕೂಲ್ ರಜ ಇರುತ್ತಲ್ಲಾ,ಬಂದು ಒಂದು ವಾರ ಇದ್ದು ಹೋಗಿ' ಅಂತ ಕೇಳಿದ್ದಳು.ಸರಿ ಅಂತ ನಾವೆಲ್ಲ ಹೊರಡಲು ತಯಾರಾದಿವಿ.ನಮ್ಮ ಸಂಜಯ್ ಮಾತ್ರ' ಅಣ್ಣಾ,ಡಿಪಾರ್ಟ್ಮೆಂಟಿನಲ್ಲಿ ವರ್ಕ್ ಲೋಡ್ ಜಾಸ್ತಿಯಿದೆ.ನಾನು ಮನೇಲಿರ್ತೀನಿ ನೀವು ಹೋಗ್ಬನ್ನಿ'ಅಂತ ಹೇಳಿ ಇಬ್ಬರು ಮೊಮ್ಮಕ್ಕಳೂ ಸೇರಿದಂತೆ ಆರು ಮಂದಿಗೆ ರೈಲ್ವೆ ಟಿಕೆಟ್ ಬುಕ್ ಮಾಡಿಸಿದ.ಯಶವಂತಪುರ ಸ್ಟೇಷನ್ನಿಗೆ ಅವನೇ ಕಾರಿನಲ್ಲಿ ನಮ್ಮನ್ನೆಲ್ಲ ಬಿಟ್ಟ.

ಕಾರಿನ ಡಿಕ್ಕಿಯಿಂದ ಲಗ್ಗೇಜುಗಳನ್ನೆಲ್ಲ ಇಳಿಸಿಕೊಂಡಾಗ,ಎಲ್ಲವೂ ಸರಿಯಾಗಿದ್ದು ನನ್ನ ಚಿಕ್ಕ ಸೂಟ್ ಕೇಸು ಮಾತ್ರ ಕಾಣೆಯಾಗಿತ್ತು!ಸೀಟುಗಳ ಕೆಳಗೆ ಹುಡುಗಿದರೂ ಇಲ್ಲ. ನಮ್ಮ .ಒಂದೊಂದೇ ಲಗ್ಗೇಜನ್ನು ಹೊರಗತೆಗೆದು ಪೋರ್ಟಿಕೋನಲ್ಲಿ ಇಡುವಾಗಲೇ ಪರಪಾಟಾಗಿರೋದು ಅಂತ ನನ್ನ ಅನುಮಾನ..ನಮ್ಮ ಕೋಣೆಯ ಮಂಚದ ಕೆಳಗಿದ್ದ ಸೂಟಕೇಸನ್ನು ನಾನೇ ತಂದಿರಿಸಿದ್ದರೆ ಚೆನ್ನಾಗಿತ್ತು ಅಂತ ಪೇಚಾಡಿಕೊಂಡೆ.ಸಾಗಣೆಯಲ್ಲಿ ಎಲ್ಲರೂ ಕೈ ಹಾಕಿದ್ದರಿಂದಾಗಿ ಯಾರ್ಯಾರು ಯಾವ್ಯಾವ ಲಗ್ಗೇಜನ್ನು ಪೋರ್ಟಿಕೋಗೆ ತಂದಿಟ್ಟರೋ ತಿಳಿಯದು.' ನೀನೇನೂ ನಿನ್ನ ಲಗ್ಗೇಜನ್ನು ನೋಡ್ಕೊಂಡೆ.,ಆದರೆ ನನ್ನ ಸೂಟುಕೇಸೆಲ್ಲಿ ಅಂತ ನನ್ನನ್ನಾಗಲೀ ಮಕ್ಕಳನ್ನಾಗಲೀ ಕೇಳಲೇ ಇಲ್ಲ.' ಅಂತ ನನ್ನವಳನ್ನು ಆಕ್ಷೇಪಿಸಿದೆ.

ಅವಳು' ನಿಮಗೂ ವಯಸ್ಸಾಯಿತು.ಅರವತ್ತಕ್ಕೆ ಅರುಳು ಮರುಳು ಅಂತಾರಲ್ಲಾ, ಹಾಗೆ ಮರೆವು ಜಾಸ್ತಿ' ಅಂತ ನನ್ನನ್ನೇ ಲಗಾಡ್ಸಿದಳು.

ನನ್ನ ಪೇಚಾಟ ಕಂಡ ಸಂಜಯ್ ' ಅಣ್ಣಾ,ಟ್ರೈನಿಗೆ ಇನ್ನೂ ಒಂದು ಗಂಟೆ

ಟೈಮಿದೆ.ಮನೆಗೆ ಹೋಗಿ ತಂದುಬಿಡ್ತೀನಿ' ಅಂತ ಹುಮ್ಮಸ್ಸಿನಿಂದ ಕೇಳಿದ.ಅದಾಗಲೆ. ಸಮಯ ನಾಲ್ಕೂವರೆ ಗಂಟೆ.ಅಲ್ಲಿಂದ ಜಯನಗರದ ನಮ್ಮ ಮನೆಗೆ ಹೋಗಿಬರೋದು ಅಂದರೆ,ಅದೂ ಈ ಟ್ರಾಫಿಕ್ ನಲ್ಲಿ? ಬೇಡ,.ಹೇಗೋ ಆಗುತ್ತೆ ಬಿಡು ' ಎಂದುಬಿಟ್ಟೆ. ಅವನು ಲಗ್ಗೇಜುಗಳನ್ನೆಲ್ಲ ನಮ್ಮ ಕಂಪಾರ್ಟ್ಮೆಂಟಿಗೆ ಸಾಗಿಸಿ ನಾವು ಸ್ವಸ್ಥಾನಗಳಲ್ಲಿ ಪ್ರತಿಷ್ಠಾಪನೆಗೊಳ್ಳುವವರೆಗೂ ಇದ್ದು ಮನೆಗೆ ಹಿಂದಿರುಗಿದ.

ಪ್ರಯಾಣದಲ್ಲಿ ಇರಬೇಕಾಗಿದ್ದ ಸಂಭ್ರಮ ನನ್ನ ಮಟ್ಟಿಗಂತೂ ಕಳೆದುಹೋಗಿತ್ತು.ಮಾರನೇ ಬೆಳಗ್ಗೆ ಆರೂವರೆಗೆ ಹೈದರಾಬಾದಿನಲ್ಲಿರುತ್ತೇವೆ.ನನಗೆ ಮೈಮೇಲಿರುವವನ್ನು ಬಿಟ್ಟರೆ ಬೇರೊಂದು ಜೊತೆ ಬಟ್ಟೆಯಿಲ್ಲ! ಸೋಪು,ಟವಲು,ಬ್ರಷ್ಷು ಪೇಸ್ಟುಗಳಿಗೂ ನನ್ನವಳನ್ನು ಆಶ್ರಯಿಸಬೇಕು.ರಾತ್ರಿ ತೊಟ್ಟ ಬಟ್ಟೆಯಲ್ಲೇ ಮಲಗಿ,ಬೆಳಗ್ಗೆ ಸ್ನಾನಾದಿಗಳನ್ನು ಮುಗಿಸಬೇಕು.ಮತ್ತೆ ಅದೇ ಬಟ್ಟೆಗಳನ್ನು ಧರಿಸಬೇಕಾದ ಅನಿವಾರ್ಯತೆ! ಚಿಕ್ಕಂದಿನಲ್ಲಿ ಅಮ್ಮ ಹೇಳುತ್ತಿದ್ದ' ದೈವವಿದ್ದೂ ದರಿದ್ರ ಅಂದಹಾಗೆ'ಎಂಬ ಗಾದೆ ನೆನಪಾಯಿತು.ಸಧ್ಯನನ್ನ ಕೈಚೀಲದಲ್ಲಿ ಸಾಕಷ್ಟು ಹಣ,ಬ್ಯಾಂಕಿನ ಕ್ರೆಡಿಟ್ ಕಾರ್ಡು,ಸೀನಿಯರ್ ಸಿಟಿಜನ್ ಕಾರ್ಡು,ಪುಟ್ಟ ಬಾಚಣಿಗೆ ಇರುವುದರಿಂದ ಹೇಗೋ ಮೂರು ದಿನ ತೂಗೀತು.ಆದರೂ ನಮ್ಮ ಕೋಣೆಯ ಮಂಚದ ಕೆಳಗೆ -ಸೂಟ್ ಕೇಸಿನೊಳಗೆ ಬೆಚ್ಚಗೆ ಮಲಗಿರುವ ಮೂರು ಜೊತೆ ಷರಟು ಪ್ಯಾಂಟುಗಳು,ಒಳ ಉಡುಪುಗಳು,ಸೋಪು, ಬ್ರಷ್ಷು, ಟವಲ್ ಇತ್ಯಾದಿಯಾಗಿ ಎಲ್ಲವೂ ನನ್ನನ್ನು ಒಮ್ಮೆಲೇ ಅಣಕಿಸಿದಂತೆ ಭಾಸವಾಯಿತು.

ಬೋಗಿಯೊಳಗೆ 'ನಿಮ್ಮ ಲಗ್ಗೇಜಿಗೆ ನೀವೇ ಜವಾಬ್ದಾರರು' ಎಂಬ ಎಚ್ಚರಿಕೆ ಮಾತು ಗೌತಮ ಬುದ್ಧನ ಬೋಧಿವೃಕ್ಷದಂತೆ ಕಂಡಿತು.

ಹೈದರಾಬಾದಿನ ಬಂಧುಗಳ ಮನೆ ಸೇರಿದಾಗ ರಾತ್ರಿ ಎಂಟಾಗಿತ್ತು. ವಾಸುಕಿಯನ್ನು ಹೊರಗೆ ಕರೆದು ನನ್ನ ಪರಪಾಡನ್ನು ತಿಳಿಸಿದೆ.ಆಕೆ 'ಮಾಮ,ಏನೂ ಯೋಚನೆ ಮಾಡಬೇಡಿ.ನಾಳೆ ಬೆಳಗ್ಗೆ ಒಂಭತ್ತಕ್ಕೆಲ್ಲ ಗಾರ್ಮೆಂಟ್ ಶೋರೂಂ ತೆಗೀತಾರೆ.ಹೋಗ್ಬಿಟ್ಟು ಬರೋಣ' ಎಂದಳು.ಆ ರಾತ್ರಿ ಹೇಗೋ ಕತೆ ಹಾಕಿದ್ದಾಯಿತು.

ಮರುದಿನ ಸ್ನಾನ ಮುಗಿಸಿ ತೊಟ್ಟಿದ್ದ ಬಟ್ಟೆಗಳನ್ನೇ ಧರಿಸಿ ಹತ್ತಿರದ ಶೋರೂಮಿಗೆ ಹೋಗಿ ಆದಷ್ಟೂ ಕಡಿಮೆ ಬೆಲೆಯ ಎರಡು ಸೆಟ್ ಜುಬ್ಬ ಪೈಜಾಮಗಳನ್ನು ಕೊಂಡು ತಂದಿವಿ.ಸುನಿಲ್ ನಮ್ಮನ್ನೆಲ್ಲ ಕಾರಿನಲ್ಲಿ ಕರೆದುಕೊಂಡು ಹೋಗಿ ಮುಖ್ಯ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ತೋರಿಸಿದರು.ರಾಮೋಜಿ ಫಿಲಂ ಸಿಟಿ ನೋಡಿದ್ದು ಒಂದು ಅಪೂರ್ವ ಅನುಭವ.ಬಿಳಿ ಜುಬ್ಬಬಿಳಿ ಪೈಜಾಮ ಧರಿಸಿ ಚಾರ್ ಮಿನಾರಿನಲ್ಲಿ ಒಡಾಡುತ್ತಿರುವಾಗ 'ತಲೆಗೊಂದು ಟೋಪೀನೂ ಹಾಕಿದ್ದಿದ್ರೆ ಚೆನ್ನಾಗಿರ್ತಿತ್ತು ಅಂತ ಗೇಲಿ ಮಾಡಿದಳು.ಹೇಗೋ ಅಂತು ಮೂರು ದಿನಗಳ ಹೈದರಾಬಾದ್ ಪ್ರವಾಸವನ್ನು ಮುಗಿಸಿದಿವಿ ಅನ್ನಿ!

ಕೆ.ಎನ್.ಭಗವಾನ್

ಗೋಷ್ಠಿಯ ಅಧ್ಯಕ್ಷೀಯ ನುಡಿಗಳು-
ನೋಡಿಯೋ ಸಾಹಿತ್ಯ ದಾಸೋಹ-೨೧೧

ನೋಡಿಯೋ ಸಾಹಿತ್ಯ ದಾಸೋಹದ ಎಲ್ಲ ನುಡಿ ಬಂಧುಗಳಿಗೂ ನಮಸ್ಕಾರ.ಇಂದಿನ ವಾಚನ ಗೋಷ್ಠಿಯ ಅಧ್ಯಕ್ಷತೆಯನ್ನು ನನಗೆ ಒಪ್ಪಿಸಿರುವುದಕ್ಕಾಗಿ ಕನ್ನಡ ಸಮನ್ವಯ ಸಮಿತಿಯ ಸಂಚಾಲಕರಾದ ಶ್ರೀ ಮಹಾಬಲ ಹಾಗೂ ಶ್ರೀ ಬೆಂ.ಶ್ರೀ.ರವೀಂದ್ರ ಅವರಿಗೆ ನನ್ನ ಕೃತಜ್ಞತೆಗಳು.

ಈ ಗೋಷ್ಠಿಯಲ್ಲಿ ಭಾಗವಹಿಸಲು ಮೊದಲಿಗೆ ೧೯ ಮಂದಿ ಹೆಸರು ನೋಂದಾಯಿಸಿದ್ದರು.ಲೇಖನಗಳನ್ನು ನನಗೆ ಕಳಿಸಿಕೊಡಲು ಮೊನ್ನೆ (೨೩-೩-೨೦೨೩) ಕೊನೆಯ ದಿನವಾಗಿತ್ತು.ಆನಂತರವೂ ಬಂದ ಒಂದೆರಡು ಲೇಖನಗಳೂ ಸೇರಿದಂತೆ ಇಂದು ೧೭ ಲೇಖನಗಳು ವಾಚಿಸಲ್ಪಟ್ಟವು.ನಾನು ಅವೆಲ್ಲವನ್ನೂ ಶ್ರದ್ಧೆಯಿಂದ ಅವಲೋಕಿಸಿ ,ನನ್ನ ಅರಿವು,ಅನುಭವಗಳಿಗೆ ದಕ್ಕಿದಷ್ಟರ ಮಟ್ಟಿಗೆ ಒಂದಿಷ್ಟು ಅನಿಸಿಕೆಗಳನ್ನು ತಿಳಿಸಬಯಸುತ್ತೇನೆ.

ಶ್ರೀ ಗುರುರಾಜ ಶಾಸ್ತ್ರಿ ಅವರು ತಾವು ಕಂಡ 'ವಿಚಿತ್ರ ಮನುಷ್ಯರು' ಕುರಿತಾಗಿ ಲಘು ಪ್ರಬಂಧವೊಂದನ್ನು ನೀಡಿದ್ದಾರೆ. 'ಸರ್,ಅವರು ತಮ್ಮ ಮಕ್ಕಳು ಅಮೆರಿಕಾದಲ್ಲಿ ಇರುವ ವಿಷಯ ಹೇಳದೆ ಭಾಷಣ ಮುಗಿಸುವುದಿಲ್ಲ' ಎಂಬುದಾಗಿ ದೂರದ ನೆಂಟ ಗಣೇಶ್ ಕುರಿತಂತೆ ಒಂದು ಮಾದರಿ ವ್ಯಕ್ತಿತ್ವ ನೀಡುತ್ತಾರೆ.ಹಾಗೆಯೇ ಎದುರಿಗಿರುವವರು ಯಾವುದೇ ವಿಷಯ ಎತ್ತಿದರೂ ಅದಕ್ಕೆ ಸಂವಾದಿ ಎಂಬಂತೆ ಬೇರೊಂದು ವಿಷಯಕ್ಕೆ ಹೊರಳುವವರು ಇನ್ನೊಂದು ಮಾದರಿ.ಇಂಥ ವ್ಯಕ್ತಿಗಳನ್ನು ನಾವು ಅಧಿಕ ಪ್ರಸಂಗಿಗಳು,ಬಡಾಯಿ ಶೂರರು ಎನ್ನುವುದು ಸಾಮಾನ್ಯ, ಲೇಖಕರು ಇಂಥ ವೈಚಿತ್ರ್ಯವನ್ನು ಮನೋರೋಗ ಎಂದು ಅನುಮಾನಿಸುತ್ತಾರೆ.!ಅಂಥ ಕಿರಿಕಿರಿಗಳಿಂದ ಪಾರಾಗುವ ಒಂದು ಸಾಧನ 'ವಾಟ್ಸಾಪ್'ಎಂಬ ಕಿವಿಮಾತನ್ನೂ ಹಾಕುತ್ತಾರೆ.

ಭಾಷೆ ಮತ್ತು ವ್ಯಾಕರಣ ಎಂಬ ಸೊಗಸಾದ ಲೇಖನ **ಶ್ರೀಗಣಪತಿ ಹೆಗಡೆ** ಅವರ ಜ್ಞಾನ ಮೂಸೆಯಿಂದ ಮೂಡಿಬಂದಿದೆ.ನಿಜ, ವ್ಯಾಕರಣವೇ ಭಾಷೆಯ ಬೆನ್ನೆಲುಬು.ಧ್ವನಿ ಜನಕಗಳಾದ ಕಂಠ,ದಂತ,ಓಷ್ಠ (ತುಟಿ)ಗಳ ಕಂಪನ, ಅವುಗಳ ಮೇಲೆ ನಾಲಗೆಯಿಂದಾಗುಕವ ಪ್ರಕ್ರಿಯೆ, ಇವೆಲ್ಲವುಗಳ ಸಂಯುಕ್ತ ಚಲನೆಯಿಂದ ಸಂಸ್ಕಾರಗೊಳ್ಳುವ ಅಕ್ಷರ,ಪದ,ವಾಕ್ಯ ಇವೆಲ್ಲದರ ಪರಿಚಯ ಮಾಡಿಸುತ್ತಾರೆ.ಶಬ್ದವು ಅಕ್ಷರ ರೂಪಗೊಳಿಸಿದಾಗ ಸಾಹಿತ್ಯವಾಗುವಿಕೆ,ಮಾತು-ಅಕ್ಷರ ರೂಪಗೊಂಡಾಗ ಅದು ಸಾಹಿತ್ವೆನಿಸುವುದು,ಮಾತು ಮತ್ತು ಬರಹಗಳ ತಾಂತ್ರಿಕ ಸಾಮ್ಯತೆ,ಲಿಪ್ಯಂತರಗಳ ವ್ಯವಸ್ತೆ ಮತ್ತು ಅನುಕೂಲತೆ ಮುಂತಾದ ವ್ಯಾಕರಣಾಂಶಗಳು ಇಲ್ಲಿವೆ.

ಅಪ್ಪ ಎಲ್ಲಿಗೆ ಹೋದರು? ಎಂಬುದು **ಶ್ರೀಮತಿ ಗಿರಿಜಾ ರಾಜ್** ವಾಚಿಸಿದ ಕಿರುಗತೆ. ಪತ್ನಿಯ ವಿಯೋಗದಿಂದ ಒಂಟಿತನದ ಸಂಕಟವನ್ನು ಅನುಭವಿಸುತ್ತಿರುವ ೮೧ ವರ್ಷದ ಸೌಮ್ಯ ಸ್ವಭಾವದ ಅಪ್ಪ, ಸೊಸೆಯ ಅನಾದರವನ್ನು ಎಂದೂ ಮಗನೆದುರು ತೋಡಿಕೊಳ್ಳದೆ ಸಂಪ್ರದಾಯ ಶರಣರಾಗಿ ಇದ್ದುಬಿಡುವರು. ಸ್ನಾನ,ದೇವರ ಪೂಜೆ ಇಲ್ಲದೆ ಮನೆಯಿಂದ ಹೊರಗೆ ಹೋಗುತ್ತಿದ್ದವರಲ್ಲ.ಅದೊಂದು ಬೆಳಗ್ಗೆ ಅಪ್ಪ ಮನೆಯಲ್ಲಿ ಕಾಣದಿದ್ದಾಗ ,ಮಗನ ಚಡಪಡಿಕೆ,ಹುಡುಕಾಟ ಆರಂಭವಾಗುತ್ತದೆ.ತಮ್ಮನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆಂಬ ಹುನ್ನಾರದ ಮಾತು ಕಿವಿಗೆ ಬಿದ್ದಾಗ ಅವರು ಬದುಕಿನ ಆಸಕ್ತಿ ಕಳೆದುಕೊಳ್ಳುತ್ತಾರೆ.'ನೊಂದ ಜೀವಕ್ಕೆ ಆತ್ಮಹತ್ಯೆಯೊಂದೇ ಮುಕ್ತಿ.ನಿನ್ನ ಹೆಂಡತಿಯ ಜೊತೆ ಜಗಳವಾಡಬೇಡ.ಆಕೆಯನ್ನು ಚೆನ್ನಾಗಿ ನೋಡಿಕೋ' ಎಂಬುದಾಗಿ ಕಾಗದವೊಂದನ್ನು ಬರೆದಿಟ್ಟು ಹೊಳೆಗೆ ಹಾರಿಕೊಳ್ಳುತ್ತಾರೆ! ಇಂಥದ್ದೊಂದು ಭಾವನಾತ್ಮಕ ಕಥೆಯಲ್ಲಿ 'ನಮ್ಮ ಗ್ರಹಚಾರ ಫಲಕ್ಕೆ ಯಾರನ್ನೂ ಹೊಣೆಗಾರರನ್ನಾಗಿ ಮಾಡಬಾರದು' ಎಂಬ ಕಿವಿಮಾತಿದೆ.

ಶ್ರೀಮತಿ ಗೌರಿ ಭಟ್ಟ ಅವರು ನಮ್ಮನ್ನು 'ಬೀದಿ ನಾಯಿಗಳ ಲೋಕದಲ್ಲಿ' ಹಾಗೇ ಒಮ್ಮೆ ಅಡ್ಡಾಡಿಸಿಕೊಂಡು ಬಂದಿದ್ದಾರೆ.ಸಾಕು ನಾಯಿ,ಬೀದಿ ನಾಯಿಗಳಿಗಿರುವ ತರ ತಮ,ಸ್ಥಿತಿ ಗತಿಗಳನ್ನು ಸ್ಥೂಲವಾಗಿ ತಿಳಿಸುತ್ತಾರೆ.ಮನೆಯ ಮಾಲಿಕರು ಪರವೂರಿಗೆ ಹೋಗುವಾಗ ತಮ್ಮ ಸಾಕು ನಾಯಿಗಳನ್ನು ಹೇಗೆ ಪರಭಾರೆ ಮಾಡುತ್ತಾರೆ, ವಿದೇಶೀ ತಳಿಗಿರುವ ಕಿಮ್ಮತ್ತು,ಸ್ಥಾನ ಮಾನ ತಮಗಿಲ್ಲವೆಂದು ತಿಳಿದ ದೇಶೀ ತಳಿಯವು ಹೇಗೆ ಬೀದಿ ನಾಯಿಗಳಾಗುತ್ತವೆ ಎಂಬಂಥ ಪರಿಸ್ಥಿತಿಗಳನ್ನು ತಿಳಿಸುತ್ತಾರೆ.ತಾವು ಕಂಡ ಆರು ಬಗೆಯ ಬೀದಿ ನಾಯಿಗಳ ವೈಶಿಷ್ಟ್ಯಗಳ ಪರಿಚಯ ಮಾಡಿಸುತ್ತಾರೆ.' ಬಾಯಿ ತನುವನ್ನು ಕಾಯುತ್ತದೆ; ನಾಯಿ ಮನೆಯನ್ನು ಕಾಯುತ್ತದೆ' ಎಂಬ ಲೋಕೋಕ್ತಿಯೂ ಇಲ್ಲಿದೆ.

ಸೌಂದರ್ಯ ಎಂಬುದು ನೋಡುವವರ ಕಣ್ಣಿನ ದೃಷ್ಟಿಯಲ್ಲಿದೆ.ಎಂಬುದು **ಶ್ರೀಮತಿ ರಾಧಿಕಾ ಗುಜ್ಜರ್** ರಚಿಸಿರುವ 'ಸುಂದರಿಯರು ಇವರು,ಚೈತ್ರದಲರುಗಳು ಇವರು' ಎಂಬ ಕವನದ ಮುಖ್ಯಾಂಶ. ಇಲ್ಲಿ ಇವರು ಸೌಂದರ್ಯವನ್ನು 'ಕಸ ಮುಸುರೆ ಹೆಣ್ಣಿನ ಕಾಲ್ಗೆಜ್ಜೆಯಲ್ಲಿ,ಮೀನು ಮಾರಾಟಗಾರ್ತಿಯು ತುರುಬಿನಲ್ಲಿ ಮುಡಿದ ಸಂಪಿಗೆ ಹೂವಿನಲ್ಲಿ,ಬೀದಿ ಗುಡಿಸುವ ಕರ್ಮಚಾರಿ ಹೆಣ್ಣಿನ ಕೈಬಳೆಗಳಲ್ಲಿ,ಹೆರಿಗೆ ಮಾಡಿಸುವ ದಾದಿಯ ಹಣೆಯಲ್ಲಿ ಕಂಗೊಳಿಸುವ ಕಾಸಿನಗಲದ ಕುಂಕುಮದಲ್ಲಿ,ಬಟ್ಟೆ ಹೊಲೆಯುವ ದರ್ಜಿ ಹೆಣ್ಣಿನ ಉಗುರು ಪಾಲಿಷ್ನಲ್ಲಿ,ಬಟ್ಟೆಗೆ ಇಸ್ತ್ರಿ ತಿಕ್ಕುವ ಹೆಣ್ಣಿನ ಕೊರಳ ಮಣಿಸರದ ಲಯದಲ್ಲಿ,ಝೊಮಾಟೋ ಕಂಪನಿಯ ಆಹಾರ ಸರಬರಾಜುಗಾರ್ತಿಯ ಕೊರಳ ಸ್ಕಾರ್ಫಿನ ಚಿತ್ತಾರದಲ್ಲಿ' ಕಂಡಿದ್ದಾರೆ. ದೃಷ್ಟಿಯಂತೆ ಆಲೋಚನೆಗಳ ಸೃಷ್ಟಿ!

ಬದುಕಿನ ಸಣ್ಣ ಪುಟ್ಟ ಪ್ರಸಂಗಗಳಿಂದಲೇ ರೋಚಕ ಲಘು ಪ್ರಬಂಧಗಳನ್ನು ರಚಿಸುವಲ್ಲಿ **ಶ್ರೀಮತಿ ನಾಗರತ್ನ ಚಂದ್ರಶೇಖರ್** ಸಿದ್ಧಹಸ್ತರು.ಅವರಿಲ್ಲಿ ಎರಡು ಲಘು ಪ್ರಬಂಧಗಳನ್ನು ವಾಚಿಸಿದ್ದಾರೆ.ಮೊದಲನೆಯದು 'ಶ್ರದ್ಧಾಂಜಲಿ'.ತಮ್ಮ ಬಂಧುವೊಬ್ಬರ ಅಂತ್ಯ ಸಂಸ್ಕಾರಕ್ಕೆ ಸ್ಮಶಾನಕ್ಕೆ ಹೋಗಿದ್ದಾಗ,ಅಲ್ಲೊಂದು ಸಮಾಧಿ ಕಲ್ಲಿನ ಮೇಲೆ ತಮ್ಮದೇ ಹೆಸರು,ಇನಿಶಿಯಲ್ಲೊಂದಿಗೆ ಇದ್ದುದನ್ನು ಕಂಡು ಇರುಸು ಮುರುಸು ಆಗುತ್ತದೆ.ಇದನ್ನು ನೋಡಿದ ತಮ್ಮ ಹತ್ತಿರದವರು ಹೇಗೆ ಪ್ರತಿಕ್ರಿಯಿಸಬಹುದು ಎಂಬ ಕೆಟ್ಟ ಕುತೂಹಲ ಉಂಟಾದರೂ,ಅದನ್ನೂ ಒಂದು ಮೋಜಿನ ಸಂಗತಿಯಾಗಿ ತೆಗೆದುಕೊಳ್ಳುತ್ತಾರೆ!

ಎರಡನೆಯ ಪ್ರಬಂಧ 'ಹದ್ದು ಹಾರಿಸಿದ ದಾವಣಿ'.ಪಾರ್ಕಿನಲ್ಲಿ ಸೇರಿದ್ದ ನಗೆಕೂಟದ ಆ್ಯಂಕರ್ ರೂಪರಾಣಿಯು ಪ್ರಾಣಾಯಾಮ ಮಾಡಲು ದಾವಣಿಯನ್ನು ಬಿಚ್ಚಿ ಕಲ್ಲೊಂದರ ಮೇಲೆ ಇರಿಸುತ್ತಾರೆ.ಆಗ ಕಲ್ಲಿನ ಮೇಲೆ ಬಂದು ಕುಳಿತ ,ಹದ್ದೊಂದರ ಕಾಲಿಗೆ ಸಿಕ್ಕಿಕೊಂಡು ಮೇಲಕ್ಕೆ ಹಾರುವಾಗ ಆ ದಾವಣಿ ಗಾಳಿಪಟದಂತೆ ಕಂಡಿದ್ದು,ಅದರಿಂದ ಹುಟ್ಟಿದ ಆತಂಕ, ಮೋಜು,ಮತ್ತೆ ಅದೇ ಹದ್ದು ಹಾರಿಬಂದು ಕಲ್ಲಿನ ಮೇಲೆ ಕುಳಿತು ದಾವಣಿಯನ್ನು ಬಿಟ್ಟು ಮೇಲಕ್ಕೆ ಹಾರಿದಾಗ ನಿಟ್ಟುಸಿರು ಬಿಟ್ಟಿದ್ದು,ಅದು ಶುಭ ಶಕುನವೋ ಅಪಶಕುನವೋ ಅಂತ ಚರ್ಚಿಸಿದ್ದು- ಎಲ್ಲವನ್ನು ಬಹು ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ ಲೇಖಕಿ.

ವಿಜಯನಗರದ ಅಮಾತ್ಯ ಲಕ್ಷ್ಮೀಧರ ಹಸುಗೂಸಾಗಿದ್ದಾಗ ಆತನ ತಾಯಿ ಹಾಲೂಡಿಸುತ್ತ' ಕೆರೆಯಂ ಕಟ್ಟಿಸು,ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು, ಅಜ್ಜೆಯೊಳ್ ಸಿಲ್ಕಿದನಾಥರಂ ಬಿಡಿಸು..' ಎಂಬಂಥ ನುಡಿಗಳನ್ನು ಕಿವಿಗೆ ಹಾಕುತ್ತಾಳೆ. **ಶ್ರೀಮತಿ ಶೀಲಾ ಅರಕಲಗೂಡು** ಅವರು ಇದೇ ಮಾದರಿಯ ಹಾರೈಕೆಯ ನುಡಿಗಳನ್ನು 'ಹೀಗಾಗು ಮಗುವೆ' ಕವನದಲ್ಲಿ ಕಾಣಿಸುತ್ತಾರೆ.ಇಲ್ಲಿನ ತಾಯಿಗೆ ಲಕ್ಷ್ಮೀಧರನಿಗೆ ತಿಳಿಸುವಂಥ ಮಹತ್ತರ ಆಶಯಗಳಿಲ್ಲ.ಮಗು ಬೆಳೆದು ದೊಡ್ಡದಾಗಿ ಹೂವು,ಹಣ್ಣು,ನೆರಳು,ಆಮ್ಲಜನಕ ನೀಡುವ ಮರದಂತೆ ಬದುಕನ್ನು ಪರೋಪಕಾರಕ್ಕೆ ತೆರೆದುಕೊಳ್ಳಲಿ,ಎಲ್ಲರನ್ನೂ ಸ್ನೇಹದಿಂದ ಕಾಣುವಂತಾಗಲಿ ಯಾರನ್ನೂ ದ್ವೇಷಿಸದಂತಾಗಲಿ ಎಂಬಂಥ ಆಶಯಗಳಷ್ಟೆ.ಇಲ್ಲಿ ಡಿವಿಜಿ ಅವರ ಕಗ್ಗದ ಧರ್ಮಚಿಂತನೆಯಿದೆ.ಪಂಜೆ ಮಂಗೇಶರಾಯರ 'ಮೂಡುವನು ರವಿ ಮೂಡುವನು' ಪದ್ಯದ 'ಏರಿದವ ಚಿಕ್ಕವನಿರಬೇಕಲ್ಲೆ' ಎಂಬ ವಿನಯವಂತಿಕೆಯ ಹಿತವಚನವಿದೆ.ಕವನದ ಪ್ರಾಸ, ಲಯ ಎರಡೂ ಚೆನ್ನಾಗಿವೆ.

ಮೈಸೂರು ರಾಮಕೃಷ್ಣಾಶ್ರಮವು ಪ್ರಕಟಿಸಿರುವ 'ಸ್ವಾಮಿ ವಿವೇಕಾನಂದರ ಕಥಾ ಸಂಚಯ' ದಿಂದ ಒಂದಿಷ್ಟು ಹೂರಣವನ್ನೆತ್ತಿಕೊಂಡು ನಮಗೆ ಉಣಬಡಿಸಿದ್ದಾರೆ **ಶ್ರೀ ವಿಠಲ್ ಇಜೇರಿ** ಅವರು.ಕಥೆಗಳು ಮತ್ತು ಉಪಮೆಗಳ ಮೂಲಕ ಜನ ಸಾಮಾನ್ಯರೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ೧೫೦ ಪ್ರಸಂಗಗಳನ್ನು ಕೆ.ಅನಂತರಾಂ ಎಂಬುವರು ಸಂಪಾದಿಸಿದ್ದಾರೆಂದು ಈ ಲೇಖಕರು

ನೆನಪಿಸುತ್ತಾರೆ.ಚೋರಭಯವನ್ನು ನೀಗಿಸಿಕೊಳ್ಳಲು,ಲೋಭ ದುರಾಸೆಗಳನ್ನು ಬಿಡಲು-ಹುಚ್ಚನೊಬ್ಬನು ಒಡಕಲು ಮಡಕೆಯನ್ನು ನೀರು ಕುಡಿಯಲು ಇರಿಸಿಕೊಳ್ಳುತ್ತಿದ್ದ ಕಥೆಯನ್ನು ಹರಿಪದ ಮಿತ್ರರು ವಿವೇಕಾನಮದರಿಗೆ ಹೇಳುವುದು ಸ್ವಾರಸ್ಯಕರವಾಗಿದೆ.

ಯುಗಾದಿ ವೈಶಿಷ್ಟ್ಯ ಕುರಿತ ಇನ್ನೊಂದು ಕವನ **ಶ್ರೀ ಶಂಕರ ರಾವ್** ಅವರಿಂದ.ಕವನದ ಶೀರ್ಷಿಕೆ-ಚೈತ್ರದ ಚಿಗುರು.ಈ ಪುಟ್ಟ ಕವನದಲ್ಲಿ ಪ್ರಕೃತಿಯ ಹಸಿರು ಸಂಭ್ರಮವನ್ನು ನಿರೂಪಿಸುತ್ತಾರೆ.

ಶ್ರೀ ಪೋಲೇನಹಳ್ಳಿ ರಮೇಶ್ ಅವರು ಬದುಕಿನ ಕಪ್ಪು-ಬಿಳುಪು ಹಾಗೂ ಬಣ್ಣದ ಚಿತ್ರಗಳನ್ನು 'ನಿವೃತ್ತ'ನ ಕಣ್ಣಿನಲ್ಲಿ ಕಂಡು ಒಂದು ತಾಕಲಾಟದ ಕವನವನ್ನಾಗಿ ಕಟ್ಟಿದ್ದಾರೆ.ಹಳೆಯ ವೃತ್ತದಲ್ಲಿ ನಿಂತು ಬದುಕಿದ ಪರಿಯನ್ನು ಆಪ್ಯಾಯಮಾನವಾಗಿ ಕಂಡರೆ,ನಿವೃತ್ತಿಯ ಪರಿಧಿಯಲ್ಲಿ ಕಂಡ ಬದುಕನ್ನು ಹಣದ ಸುತ್ತ ಕಟ್ಟಿಕೊಳ್ಳುವ ಕೋಟೆ ಎಂದು ಪರಿಗಣಿಸುತ್ತಾರೆ.ಹಳ್ಳಿಯ ಬದುಕಿನಲ್ಲಿ ಆಹ್ಲಾದಿಸಿದ ಬೆಳದಿಂಗಳು,ಅಮ್ಮ ಎಣಿಸದೆ ಇತ್ತ ಕೈತುತ್ತಿನ ಸವಿ ಎಲ್ಲವೂ ನಿವೃತ್ತನ ಬದುಕಿನಲ್ಲಿ ಸವಿ ನೆನಪುಗಳು, ಕಾಲವು ಹಿಂದಕ್ಕೆ ಸರಿಯದಷ್ಟೆ ಎಂಬ ಚಡಪಡಿಕೆ,ವಿವೇಕ ಇಲ್ಲಿದೆ.

ನಮ್ಮಲ್ಲಿ ಹೆಚ್ಚಿನವರು ಅರಸೀಕೆರೆ ಸಮೀಪ ಇರುವ ಮಾಲೆಕಲ್ಲು ಬೆಟ್ಟದ ಬಾಲಾಜಿಯ ದರ್ಶನ ಮಾಡಿರಲಾರೆವು. **ಶ್ರೀಮತಿ ಸುವರ್ಣಲಕ್ಷ್ಮಿ** ಅವರು ಇಲ್ಲೊಂದು ಲೇಖನದ ಮೂಲಕ ನಮಗೆ ಕ್ಷೇತ್ರದರ್ಶನ ಮಾಡಿಸಿದ್ದಾರೆ.ಬೆಟ್ಟಕ್ಕಿರುವ ೧೨೫೦ ಮೆಟ್ಟಿಲುಗಳನ್ನು ಹತ್ತಿಹೋಗಿ ಶ್ರೀನಿವಾಸ, ಪದ್ಮಾವತಿ ಇಬ್ಬರ ದರ್ಶನವನ್ನೂ ಮಾಡಲು ಪ್ರೇರಣೆ ನೀಡಿದ್ದಾರೆ.ಈ ಲೇಖನದಲ್ಲಿ ಪ್ರವಾಸದ ಸ್ವಂತ ಅನುಭವಕ್ಕಿಂತ ಸ್ಥಳ ಪುರಾಣ ಮತ್ತು ಭೌಗೋಳಿಕ ಅಂಶಗಳೇ ಹೆಚ್ಚಾಗಿವೆ.

ಎಪ್ಪತ್ತರ ಹರೆಯದ ಹೆಣ್ಣೊಬ್ಬಳಿಗೆ ಸೋದರಳಿಯ(ತಮ್ಮನ ಮಗನ ಮದುವೆಯಲ್ಲಿ ಸಂಭ್ರಮಿಸುವುದೋ, ಇಲ್ಲವೇ ಬಹು ಕಾಲದನಂತರ ಸಿಗಲಿರುವ ನಿಡುಗಾಲದ ಗೆಳೆಯನ ಸಾಂಗತ್ಯ ಸಲ್ಲಾಪದಲ್ಲಿ ತೊಡಗುವುದು ಮುಖ್ಯವೋ ಎಂಬ ಜಿಜ್ಞಾಸೆ. **ಶ್ರೀಮತಿ ಮಾಧುರಿ ಕೃಷ್ಣ** ಅವರು ಅಂಥದ್ದೊಂದು ಕಾತರ,ಕುತೂಹಲದ ಸಂದರ್ಭವನ್ನು, ಚಡಪಡಿಕೆಯನ್ನು,ಕೊನೆಯಲ್ಲಿ ಉಂಟಾಗುವ ನಿರಾಶೆಯನ್ನು 'ನಾನೂ,ನನ್ನ ಸಹಪಾಠಿ ಮಿತ್ರನೂ' ಕಥೆಯಲ್ಲಿ ಆಸಕ್ತಿ ಹುಟ್ಟಿಸುವ ರೀತಿಯಲ್ಲಿ ನಿರೂಪಿಸಿದ್ದಾರೆ. ಮದುವೆ ಮುಹೂರ್ತ,ಊಟ ಮುಗಿಸಿಕೊಂಡು ಮಗನ ಕಾರಿನಲ್ಲಿ ಮಿತ್ರನನ್ನು ಕಾಣಲು ಹೋದಾಗ ಎದುರಾಗಿದ್ದು ಗಾಬರಿ ಹುಟ್ಟಿಸುವ ಸನ್ನಿವೇಶ.ಅ ಮಿತ್ರನ ರಕ್ತದೊತ್ತಡದಲ್ಲಿ ಏರುಪೇರಾಗಿ ಆಸ್ಪತ್ರೆಯ ಆಂಬ್ಯುಲೆನ್ಸ್ ಹತ್ತುತ್ತಿರುವ ಸನ್ನಿವೇಶ! ಎಲ್ಲವೂ ನಾವಂದುಕೊಂಡಂತೆ ಆಗುತ್ತದೆಯೇ?

'ತಾಳುವಿಕೆಗಿಂತನ್ಯ ತಪವು ಇಲ್ಲ' ಎಂಬುದಾಗಿ ದಾಸ ಪುರಂದರರು ಪಲ್ಲವಿಸಿರುವ ಧಾಟಿ ಹಿಡಿದು 'ಮೌನಕ್ಕಿಂತ ತಪವಿಲ್ಲ' ಎಂದು ಇನ್ನೂ ಒಂದು ಹೆಜ್ಜೆ ಮುಂದೆ ನಿಂತು ಹಾಡಿದ್ದಾರೆ, **ಶ್ರೀಮತಿ ಸಿ.ಆರ್.ಕಮಲಾಕ್ಷಿ** ಅವರು.'ಮಾತು ಆಡಿದರೆ ಹೋಯಿತು,ಮುತ್ತು ಒಡೆದರೆ ಹೋಯಿತು' ಎಂಬ ಗಾದೆಯೇ ಇದೆಯಲ್ಲವೇ? ಅತಿ ಮಾತು ವಿವೇಚನೆಯ ತೂಕ ತಪ್ಪಿಸುತ್ತದೆ.ಮೆಚ್ಚಿಸುವ ಮಾತುಗಳು ಸೊಕ್ಕಿ ನುಡಿಯುವುದನ್ನು ಕಲಿಸುತ್ತವೆ.ಚುಚ್ಚು ಮಾತಿನಿಂದ ಅನ್ಯರ ಅಂತಃಶಕ್ತಿ,ಆತ್ಮವಿಶ್ವಾಸ ಉಡುಗುತ್ತವೆ.ಇಂಥ ಅಪಾಯಗಳಿಂದ ದೂರವಿರಲು ಮೌನವೊಂದೇ ಸೂಕ್ತ ಸಾಧನ ಎಂಬುದನ್ನು ಇಲ್ಲಿನ ಒಂಭತ್ತು ಚರಣಗಳ ಕವನ ಸಾದರಪಡಿಸುತ್ತದೆ.

ಗ್ರಾಮೀಣ ಬಾಲಕನೊಬ್ಬ ತಮ್ಮ ಮನೆಯ ಒಪ್ಪಾರದ ಜಂತೆಯಲ್ಲಿ ಕಟ್ಟಿದ್ದ ಗುಬ್ಬಿಯ ಗೂಡನ್ನು- ಆನಂತರ ಮೂರು ಪುಟ್ಟ ಮರಿಗಳನ್ನು - ತಾಯಿ ಹಕ್ಕಿ ತನ್ನ ಪುಟ್ಟ ಮರಿಯ ಬಾಯಿಗೆ ಆಹಾರ ಇರಿಸುತ್ತಿದ್ದುದನ್ನು ಮುಗ್ಧ ಕುತೂಹಲದಿಂದ ನೋಡುವುದು,ಅಯತಪ್ಪಿ ಗೂಡಿನಿಂದ ಕೆಳಗೆ ಬಿದ್ದ ಮರಿ ಗುಬ್ಬಿಯು ಸತ್ತಿರುವುದನ್ನು ಕಂಡು ಮರುಗುವ ಒಂದು ಕಿರುಗತೆ -ಗುಬ್ಬಿಯ ಗೂಡು.ಮನುಷ್ಯರು ಮುಟ್ಟಿದ ಮರಿ ಹಕ್ಕಿಯನ್ನು ತಾಯಿ ಹಕ್ಕಿ ಹೊರದಬ್ಬುತ್ತದೆಂದು ಬಾಲಕನ ತಾಯಿ ಹೇಳಿದಾಗ ಅದರಿಂದ ಉಂಟಾಗುವ ಪಶ್ಚಾತ್ತಾಪವನ್ನು **ಶ್ರೀಮತಿ ಅನ್ನಪೂರ್ಣ** ಸರಳ ನಿರೂಪಣೆಯ ಒಂದು ಕಥೆಯಾಗಿಸಿದ್ದಾರೆ.'ಗುಡ್ಲೋ ದೀಪಮು,ನೋಟ್ಲೋ ಕಡಿ'(ಗುಡೀಲಿ ದೀಪ,ಬಾಯಲ್ಲಿ ತುತ್ತು) ಎಂಬುದೊಂದು ಹೊಸ ತೆಲುಗು ಗಾದೆಯನ್ನು ಕೇಳಿದಂತಾಯ್ತು.

ಶ್ರೀಮತಿ ರೇಣುಕಾ ದೇಸಾಯಿ ಅವರು ವಾಚಿಸಿದ ಎರಡೂ ಕವನಗಳು ಯುಗಾದಿ ಕುರಿತಾದವು.' ಬೇವು ಬೆಲ್ಲ ಸವಿದು,ಭಾವೈಕ್ಯತೆ ಬೆಸೆದು,ಹೊಸ ಮನ್ವಂತರಕ್ಕೆ ನಾಂದಿ ಹಾಡೋಣ' ಎಂದು ಹಾರೈಸುವ ಕವಯಿತ್ರಿ,ಪ್ರಕೃತಿಯು ಮೈತಳೆದ ಸೊಬಗನ್ನು 'ನನ್ನ ಮಾಯೆಯ ನೋಡಿಲ್ಲಿ- ಎಂದೆನುತ ಹರಸಿದಳು ಅಮೃತ ದೃಷ್ಟಿ ,ಗಿಡ ಮರಗಳೆಡೆಗೆ.' ಎಂಬಂಥ ರೂಪಕವನ್ನೂ ಇಲ್ಲಿ ಕಾಣಿಸಿದ್ದಾರೆ.

'ರವಿ ಕಾಣದ್ದನ್ನು ಕವಿ ಕಂಡ' ಎಂಬುದು ನಮಗೆ ಗೊತ್ತಿರುವ ಗಾದೆಯೇ. **ಶ್ರೀ ಭ.ರಾ.ವಿಜಯ ಕುಮಾರ್** ಅವರು ಅಗ್ನಿ ಪುರಾಣದ ಒಂದು ಶ್ಲೋಕದಿಂದ 'ಕವಿರೇವ...' ಎಂಬ ಕೊಂಡಿ ಪದವೊಂದನ್ನು ಎತ್ತಿಕೊಂಡು ಅದನ್ನೇ ಲೇಖನದ ಶೀರ್ಷಿಕೆಯಾಗಿರಿಸಿದ್ದು ಮೊದಲಿಗೆ ನನಗಂತೂ ಅರ್ಥವಾಗಿರಲಿಲ್ಲ.ಆ ಬಳಿಕ ಅವರೇ ಒದಗಿಸಿದ ಪೂರ್ಣ ಶ್ಲೋಕ ಹೀಗಿದೆ-

"ಅಪಾರೇ ಕಾವ್ಯ ಸಂಸಾರೇ,ಕವಿರೇವ ಪ್ರಜಾಪತಿಃ!
ಯದಾಸ್ಮೈ ರೋಚತೇ ವಿಶ್ವಮ್ ತಥೇವಮ್ ಪರಿವರ್ತತೇ"

ಅಂದರೆ- ದಡವಿಲ್ಲದ ಕಾವ್ಯ ಪ್ರಪಂಚದಲ್ಲಿ ಕವಿಯೇ ಸೃಷ್ಟಿಕರ್ತ

ಬ್ರಹ್ಮನು.ಅವನಿಗೆ ಲೋಕವು ಹೇಗೆ ಕಾಣುತ್ತದೋ,ರುಚಿಸುತ್ತದೋ,ಹಾಗೆ ಅದನ್ನು ಅವನು ರೂಪಿಸುತ್ತಾನೆ.ಈ ವಸ್ತುವನ್ನಿರಿಸಿಕೊಂಡು ಲೇಖಕರು ಐದು ಚರಣಗಳ ಚೌಪದಿಯನ್ನ ರಚಿಸಿದ್ದಾರೆ.

ಇದಿಷ್ಟೂ ಇಂದು ವಾಚಿಸಲಾದ ಲೇಖನಗಳ ಕುರಿತು ನನ್ನ ಸ್ಥೂಲ ಅಭಿಪ್ರಾಯ. ಈ ಸಾರಿಯ ಗೋಷ್ಠಿಗೆ ಬಂದ ಲೇಖನಗಳು ಹಿಂದೆಂದಿಗಿಂತ ಕಮ್ಮಿ ಎಂಬ ಅಭಿಪ್ರಾಯವಿದೆ.. ಪ್ರಾಯಶಃ ಯುಗಾದಿ - ರಾಮನವಮಿ ಹಿನ್ನೆಲೆಯ ಪರಿಣಾಮ ಇದ್ದೀತು.ಯಾವುದೇ ಪ್ರಕಾರದ ಲೇಖನವನ್ನು ಆರೇಳು ನಿಮಿಷಗಳ ವಾಚನ ಮಿತಿಯಲ್ಲಿ ರಚಿಸುವುದು ಒಂದು ಸವಾಲೇ ಸರಿ.ಈ ನಿಟ್ಟಿನಲ್ಲಿ ಆಲೋಚಿಸುವುದಾದರೆ ನಮ್ಮ ಸಾಹಿತ್ಯ ದಾಸೋಹಿಗಳ ಉತ್ಸಾಹ ಹಾಗೂ ಪಾಲ್ಗೊಳ್ಳುವಿಕೆಯನ್ನು ಮೆಚ್ಚಲೇ ಬೇಕು.ಮುಂಬರುವ ಗೋಷ್ಠಿಗಳಲ್ಲಿ ದಾಸೋಹಿಗಳ ಸಂಖ್ಯೆ ದೊಡ್ಡದಿರುತ್ತದೆ ಎಂದು ನಾವು ನಂಬೋಣ.

ಈ ಗೋಷ್ಠಿಯ ಆಯೋಜಕರೆಲ್ಲರಿಗೂ ಕೃತಜ್ಞತಾ ಪೂರ್ವಕ ನಮಸ್ಕಾರಗಳು.